# ನಾದನೂಪುರ ವಂಡಾರು
# Nadanoopura Vandaru

ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/



ಶ್ರೀ ಕ್ಷೇತ್ರ ಮಂದಾರ್ತಿ ಮೇಳದ ರಂಗಸ್ಥಳ

ಪರಿವಿಡಿ
ಬೋರ್ಡ್ ರೂಮ್
ಸಂಪಾದಕೀಯ
ಸರ್ವಧರ್ಮದ ಪ್ರತಿಭೆಗಳ ಸಂಗಮ– ಯಕ್ಷಗಾನ
ಯಕ್ಷರಂಗದ ಭೀಷ್ಮ– ಬಳ್ಕೂರು ಕೃಷ್ಣ ಯಾಜಿ
ಧೀರ ಕಲೆಯೊಳಗೆ ಕೀರವಾಣಿಯರು–19 ಶ್ರೀಮತಿ ವಿದ್ಯಾ ಕೋಳ್ಯೂರು
ಶೇಡಿಗುಮ್ಮೆ ವಾಸುದೇವ ಭಟ್ಟರ ಯಕ್ಷಗಾನ ಪ್ರಸಂಗ ಕೃತಿಗಳು

## ತಿಂಗಳ ಹೈಲೈಟ್ಸ್

ಮಂದಾರ್ತಿ ಸೇವೆಯಾಟಕ್ಕೆ ನೆರೆವ ಜನಸಾಗರ –ಕ್ಷೇತ್ರದ ಸಂಪ್ರದಾಯದ ಒಂದು ನೋಟ
ರಂಗಸ್ಥಳ ಪಕ್ಷ ಪ್ರಚಾರದ ವೇದಿಕೆಯಾಗುವುದೆಷ್ಟು ಸರಿ??
ಸರ್ವ ಧರ್ಮದ ಪ್ರತಿಭೆಗಳ ಸಂಗಮ – ಭಾರತೀಯ ಸಂಸ್ಕೃತಿಯ ಪ್ರತೀಕ – ಯಕ್ಷಗಾನ
ಯಕ್ಷರಂಗದ ಭೀಷ್ಮ – ಬಳ್ಕೂರು ಕೃಷ್ಣ ಯಾಜಿ
"ಯಕ್ಷಮಂಜೂಷಾ"ದ ಸ್ಥಾಪಕಿ, ಹಿಮ್ಮೇಳದ ಯಕ್ಷಗಾನ ಸಾಧಕಿ– ಶ್ರೀಮತಿ ವಿದ್ಯಾ ಕೋಳ್ಯೂರು
ಸಂಗೀತ ಆಸ್ವಾದಿಸಲು ಯಕ್ಷಗಾನಕ್ಕೆ ಹೋಗಬೇಕೇ?

## ಬೋರ್ಡ್ ರೂಂ

**ಪ್ರೀತಿಯ ಯಕ್ಷ ಕಲಾಭಿಮಾನಿಗಳೇ,**

ದೇವಸ್ಥಾನಗಳು ಯಕ್ಷಗಾನ ಮೇಳಗಳ ಆಶ್ರಯವಾಗಿ ಕಲಾರಾಧನೆ ನಡೆದು ಬಂದ ವಿಷಯ ಎಲ್ಲರಿಗೂ ತಿಳಿದಿರುವಂಥದ್ದು. ಹಾಗೆಯೇ, ಅನೇಕ ದೇವಳಗಳ ಮೇಳ ಪ್ರಾರಂಭಗೊಂಡ ಬಗ್ಗೆ ಹಲವಾರು ಐತಿಹ್ಯಗಳನ್ನು ನಾವು ಗಮನಿಸಬಹುದು. ದೇವಳದ ಆಶ್ರಯದಲ್ಲಿ ನಡೆಯಲ್ಪಡುವ ಮೇಳಗಳ ಆಟದ ತಿರುಗಾಟದಲ್ಲಿ ಅದರದೇ ಆದ ಪರಂಪರೆ, ಸಂಪ್ರದಾಯ, ಕಟ್ಟುಪಾಡುಗಳಿರುತ್ತವೆ. ಅಂತಹ ಪ್ರಮುಖ ಕ್ಷೇತ್ರಗಳ ಮೇಳಗಳಲ್ಲಿ ಒಂದು ಮಂದಾರ್ತಿ ಮೇಳ. ಮಂದಾರ್ತಿ ಮೇಳದ ಪ್ರಥಮ ಸೇವೆಯಾಟ ಅದರದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಮಂದಾರ್ತಿ ಕ್ಷೇತ್ರ ಹಿಂದು ಧಾರ್ಮಿಕ ದತ್ತಿ ಇಲಾಖೆಯಿಂದ ನಡೆಯಲ್ಪಡುವ ದೇವಸ್ಥಾನ. ಮೇಳಗಳ ನಿರ್ವಹಣೆಯ ಹೊಣೆಗಾರಿಕೆ ಸರಕಾರದ್ದಾದರೂ ದೇವಸ್ಥಾನದ ಸಂಪ್ರದಾಯ ಪರಂಪರೆ ಏನಿದೆಯೋ ಅದೇ ರೀತಿಯಲ್ಲಿ ಪ್ರತಿ ವರ್ಷವೂ ಸೇವಯಾಟ ಜರುಗುತ್ತದೆ. ಮೇಳವನ್ನು ನಡೆಸುವ ವ್ಯವಸ್ಥೆ ಹಾಗೂ ಅದರ ಮುಖ್ಯಸ್ಥರು ದೇವಸ್ಥಾನದ ಸಂಪ್ರದಾಯದಂತೆಯೇ ಯಾವ ಕುಂದು ಬಾರದೇ ಐದೂ ಮೇಳಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಮಂದಾರ್ತಿ ಮೇಳದ ಮೊದಲ ಸೇವೆಯಾಟದ ಬಗ್ಗೆ ಹೇಳುವುದಾದರೆ ಮೇಳದ ಸೇವೆಯಾಟ ನೋಡಲೆಂದೇ ಜನ ಕಿಕ್ಕಿರಿದು ನೆರೆಯುತ್ತಾರೆ. ಸಾಮಾನ್ಯವಾಗಿ ಡೇರೆ ಮೇಳದ ಸೇವೆಗೆ ಹೋಲಿಸಿದರೆ ಹರಕೆಯಾಟದ ಮೇಳಗಳಲ್ಲಿ ಮೊದಲ ಸೇವೆಗೆ ಭಕ್ತಾದಿಗಳ ಸಂಖ್ಯೆ ಅತ್ಯಧಿಕ. ಡೇರೆ ಮೇಳಗಳಲ್ಲಿ ಹರಕೆಯ ಉದ್ದೇಶದಿಂದ ಪ್ರೇಕ್ಷಕರು ಬರುವುದಲ್ಲ. ಪ್ರಸಂಗದ ಕುತೂಹಲಕ್ಕೆ, ಕಲಾವಿದರ ಮೇಲಿನ, ಮೇಳದ ಮೇಲಿನ ಅಭಿಮಾನಕ್ಕೆ ಸೇವೆಗೆ ಬರುತ್ತಾರೆ. ಆದರೆ ಹರಕೆ ಮೇಳಗಳಲ್ಲಿ ಸೇವೆಯಾಟವನ್ನು ನೋಡಲೆಂದೇ ಬೇರೆ ಬೇರೆ ಕಡೆಗಳಿಂದ ಭಕ್ತಾದಿಗಳು ಬರುತ್ತಾರೆ. ಈ ಹಿನ್ನಲೆಯಲ್ಲಿ ಯಕ್ಷಗಾನ ದೈವಿಕ ಪ್ರಭಾವ ಇರುವಂಥದ್ದು ಅನ್ನೋದು ಸ್ಪಷ್ಟವಾದುದು.

ಕ್ಷೇತ್ರದ ಭಕ್ತರಷ್ಟೆ ಅಲ್ಲದೆ, ಈ ಹಿಂದೆ ಹರಕೆ ಆಟ ಮಾಡಿಸಿದವರು, ಮುಂದೆ ಮಾಡಿಸುವವರು, ಆಟ ಬುಕಿಂಗ್ ಮಾಡುವವರು, ತಿರುಗಾಟದ ಅವಧಿಯಲ್ಲಿ ಆಟದ ದಿನ ನಿಗದಿಯಾದವರು, ಮೊದಲ ಹಾಗೂ ಕೊನೆಯ ದೇವರ ಸೇವೆಯಾಟಕ್ಕೆ ಭಕ್ತಿ ಶ್ರದ್ಧೆಯಿಂದ ಬರುತ್ತಾರೆ. ಅಲ್ಲದೆ ಕ್ಷೇತ್ರದ ಪ್ರಸಂಗವನ್ನು ನೋಡುತ್ತೇವೆ ಎಂದು ಹರಕೆ ಹೇಳಿಕೊಳ್ಳುವವರೂ ಇದ್ದಾರೆ. ಪರಂಪರೆಯಂತೆ ಮೊದಲ ದಿನ ಸೇವೆಯಾಟದಂದು ಕ್ಷೇತ್ರದಲ್ಲಿ ಬೆಳಿಗ್ಗೆ ಮಂದಾರ್ತಿ ಮೇಳದ ಐದೂ ಗಣಪತಿ ಮೂರ್ತಿಗಳನ್ನು ಶೃಂಗರಿಸಿ ಪೂಜೆ ಗಣಹೋಮ ನಡೆಸ್ತಾರೆ. ಆ ಸಂದರ್ಭ ಐದೂ ಮೇಳದ ಹಿಮ್ಮೇಳ ಕಲಾವಿದರು (ಸಂಗೀತಗಾರರು ಸೇರಿದಂತೆ 15 ಜನ ಭಾಗವತರು, 10 ಜನ ಚೆಂಡೆ ವಾದಕರು, 10 ಜನ ಮದ್ದಳೆ ವಾದಕರು) ಪೂಜೆಯಲ್ಲಿ ಪಾಲ್ಗೊಂಡು ಗಣಪತಿ ಸ್ತುತಿ ಮಾಡ್ತಾರೆ. ನಂತರ ಕ್ಷೇತ್ರಪಾಲನ ಪೂಜೆ ನಡೆಯುತ್ತದೆ. ಸಂಜೆಯ ಹೊತ್ತಿಗೆ ಕಲ್ಕುಡ ದೈವದ ದರ್ಶನ ನಡೆಯುತ್ತದೆ. ದೈವದ ಸಾನಿಧ್ಯದಲ್ಲಿ ಪ್ರತಿಯೊಬ್ಬ ಕಲಾವಿದನೂ ದೈವದ ಪ್ರಸಾದ ಪಡೆದುಕೊಳ್ಳಬೇಕು. ನಂತರ ಮಂಗಳ ವಾದ್ಯಘೋಷಗಳೊಂದಿಗೆ ಆಯಾ ಚೌಕಿಯ ಗಣಪತಿಯನ್ನು ಕಲಾವಿದರು ಭಕ್ತಿ ಹಾಗೂ ಸಂಭ್ರಮದಿಂದ ಚೌಕಿಗೆ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಚೌಕಿಪೂಜೆಯಲ್ಲಿ ಪ್ರಥಮ ಬಾರಿಗೆ ಮೇಳದಲ್ಲಿ ಗೆಜ್ಜೆ ಕಟ್ಟುವ ಕಲಾವಿದರು ದೇವರೆದುರು ಗೆಜ್ಜೆ ಇಟ್ಟು ನಮಸ್ಕಾರ ಮಾಡಿ ಹಿರಿಯರಿಂದ ಆಶೀರ್ವಾದ ಪಡೆದು ಗೆಜ್ಜೆ ಸೇವೆಗೆ ಅಣಿಯಾಗುತ್ತಾರೆ. ಮತ್ತೊಂದು ವಿಶೇಷವೆಂದರೆ ಮೇಳದ ಕಲಾವಿದರು ಅಲ್ಲಿಯೇ ಹತ್ತಿರದ ಬಾರಾಳಿ



**ಗೋವಿಂದ ವಂಡಾರು**

ಗಣಪತಿಗೆ ಪೂಜೆ ಸಲ್ಲಿಸಿ ನಾಟ್ಯ ಸೇವೆ ಸಲ್ಲಿಸುವ ಸಂಪ್ರದಾಯವಿದೆ. ಈ ಕ್ಷೇತ್ರದ ಸ್ಥಳ ಐತಿಹ್ಯದ ಪ್ರಕಾರ ಹಾಗೂ ಕ್ಷೇತ್ರ ಮಹಾತ್ಮೆಯಲ್ಲಿ ಒಂದು ಸನ್ನಿವೇಶದಲ್ಲಿ ಚಿತ್ರಿತವಾಗಿರುವಂತೆ ಅಂತು ಸುರ್ಗೊಳಿ ಎಂಬಾತ ಸುತ್ತಮುತ್ತಲಿನ ಪ್ರದೇಶದಿಂದ ಕಳ್ಳತನ ಮಾಡಿ ಪೆಟ್ಟಿಗೆಯಲ್ಲಿ ಸಂಪತ್ತು ಹಾಗೂ ದೇವರ ವಿಗ್ರಹಗಳನ್ನು ಕೊಂಡೊಯ್ಯುತ್ತಾನೆ. ಸಮೀಪದ ಈಗಿನ ಆನೆಗುಡ್ಡೆಯ ದೇವಸ್ಥಾನದಲ್ಲೂ ಕಳ್ಳತನ ಮಾಡಿಕೊಂಡು ಬರುತ್ತಿರಬೇಕಾದರೆ ಅಲ್ಲಿ ಆನೆಗಳು ಆತನನ್ನು ಅಡ್ಡ ಹಾಕುತ್ತವೆ. ಹಾಗಾಗಿ ಈ ಕ್ಷೇತ್ರಕ್ಕೆ ಆನೆಗುಡ್ಡೆ ಎಂಬ ಹೆಸರು ಬಂತೆಂಬ ಐತಿಹ್ಯವಿದೆ. ಅಲ್ಲಿಂದ ತಪ್ಪಿಸಿಕೊಂಡು ಆತ ಈಗಿನ ಬಾರಾಳಿ ಎಂಬಲ್ಲಿಗೆ ಬರುತ್ತಾನೆ. ಆತ ತಂದಿದ್ದ ಸಂಪತ್ತಿನ ಪೆಟ್ಟಿಗೆ ಆತನಿಗೆ ಭಾರವಾಗಿ ತಲೆಯಿಂದ ಕೆಳಗಿಳಿಸಿ ಅಲ್ಲೇ ಇಡುತ್ತಾನೆ. ಮತ್ತೆ ಅಲ್ಲಿಂದ ಅದನ್ನು ಆತನಿಗೆ ಎತ್ತಲು ಸಾಧ್ಯವಾಗುವುದಿಲ್ಲ. ಪೆಟ್ಟಿಗೆಯ ಭಾರದಿಂದಾಗಿ ಅಂತು ಎಂಬಾತ ಪೆಟ್ಟಿಗೆಯನ್ನು ಅಲ್ಲಿಯೇ ಬಿಡಬೇಕಾಗುತ್ತದೆ. ನಂತರ ಈ ಪ್ರದೇಶ ಬಾರಾಳಿ ಎಂದೇ ಹೆಸರಾಯಿತಂತೆ. ಈ ಬಾರಾಳಿ ಕ್ಷೇತ್ರ ಮಂದಾರ್ತಿಯಿಂದ ಸುಮಾರು ಎರಡು ಕಿಮೀ ದೂರದಲ್ಲಿದೆ.

ಅಂತು ಸುರ್ಗೊಳಿಗೆ ದೇವಿಯ ಆವಾಹನೆಯಾದ ನಂತರ ಮಂದಾರ್ತಿ ದುರ್ಗಾಪರಮೇಶ್ವರಿ ದೇವಿ ತನಗೆ ಪ್ರತೀ ವರ್ಷ ಗೆಜ್ಜೆ ಸೇವ ನಡಯಬೇಕು ಎಂದು ಆದೇಶ ನೀಡುತ್ತಾಳೆ. ಆ ಬಳಿಕ ಯಕ್ಷಗಾನ ಸೇವೆ ಇಲ್ಲಿ ಜನಪ್ರಿಯವಾಗಿದೆ. ಅಲ್ಲದೆ ಯಕ್ಷಗಾನ ಸೇವೆಯ ಹರಕೆ ಹೇಳಿಕೊಂಡವರ ಇಷ್ಟಾರ್ಥಗಳು ನಡೆಯುವಂತೆ ದೇವಿ ಅನುಗ್ರಹಿಸುತ್ತಾಳೆ ಎಂಬ ನಂಬಿಕೆ ಇದೆ. ಶ್ರೀ ಮಂದಾರ್ತಿ ದುರ್ಗಾ ಪರಮೇಶ್ವರಿ ಕೃಪಾಪೋಷಿತ ಯಕ್ಷಗಾನ ಮಂಡಳಿ ಈ ಸಾಲಿನ ತಿರುಗಾಟಕ್ಕೆ ಸಜ್ಜಾಗಿದೆ. ಮೇಳ, ಕಲಾವಿದರು ಹಾಗೂ ಯಕ್ಷಾಭಿಮಾನಿಗಳಿಗೆ ಯಾವುದೇ ವಿಘ್ನ ಆತಂಕಗಳು ಎದುರಾಗದೇ ಪೂರ್ಣ ತಿರುಗಾಟವನ್ನು ನಡೆಸಲಿ ಎಂದು ಶ್ರೀ ಮಾತೆ ಮಂದಾರ್ತಿ ಅಮ್ಮನವರಲ್ಲಿ ನನ್ನ ಪ್ರಾರ್ಥನೆ.

**ನಿಮ್ಮವನೆ,**

**ಗೋವಿಂದ ವಂಡಾರು**

---

## ಸಂಪಾದಕೀಯ

**ಸಾ**ಮಾನ್ಯವಾಗಿ ಕಲಾವಿದರಾಗಿ ಯಾವುದೇ ಪಕ್ಷದ ಕುರಿತು ಒಲವು ಹೊಂದಿರೋದ್ರ ಬಗ್ಗೆ ಅಭಿಮಾನಿಗಳಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆ. ಯಾವುದೇ ಕ್ಷೇತ್ರದ ಕಲಾವಿದನೊಬ್ಬ ವೈಯುಕ್ತಿವಾಗಿ ಯಾವುದೇ ಪಕ್ಷದ ಪರವಾಗಿದ್ದರೂ ಸಾರ್ವತ್ರಿಕವಾಗಿ ತೋರ್ಪಡಿಸೋದು ಪ್ರೇಕ್ಷಕರಲ್ಲಿ ಅಸಮಾಧಾನಕ್ಕೆ/ತಿರಸ್ಕಾರಕ್ಕೆ ಕಾರಣವಾಗುತ್ತೆ. ದೊಡ್ಡ ವ್ಯಾಪ್ತಿಯಿರೋ ಸಿನಿಮಾವನ್ನೇ ಗಮನಿಸಿದಾಗ ಸಿನಿ ನಟರು ಒಂದು ಪಕ್ಷದ ಪರವಾಗಿ ಕೆಲಸ ಮಾಡಿದರೆ ಸಾರ್ವಜನಿಕ ವಿರೋಧ ಎದುರಿಸೋದನ್ನು ನೋಡಿದ್ದೇವೆ. ಇದಕ್ಕೆ ಯಕ್ಷಗಾನ, ಸಾಹಿತ್ಯ ಕೇತ್ರ ಹೊರತಾಗಿಲ್ಲ. ಯಾವುದೇ ಸಾಹಿತಿಗಳು ಒಂದು ಪಕ್ಷದ ಪರವಾಗಿ ಬರೆದಾಗ ಅವರನ್ನು ಬಹಿರಂಗವಾಗಿ ಎಡಪಂಥೀಯ ಬರಹಗಾರರು ಬಲಪಂಥೀಯ ಬರಹಗಾರರು ಅನ್ನೋದಾಗಿ ಬಿಂಬಿಸೋದುಂಟು. ಸಾಮಾನ್ಯವಾಗಿ ಪಕ್ಷಾತೀತ ಬರಹಗಾರರನ್ನು ಸಮಾಜ ಉತ್ತಮ ಸಾಹಿತಿ ಎಂಬುದಾಗಿ ಸ್ವೀಕರಿಸುತ್ತೆ. ಯಕ್ಷಗಾನಕ್ಕೆ ಬಂದಾಗ ಕಲಾವಿದರು ಒಂದು ಪಕ್ಷದ ಪ್ರಚಾರಕ್ಕೆ ರಂಗಸ್ಥಳವನ್ನು, ಕಲಾ ಮಾಧ್ಯಮವನ್ನು ಬಳಸಿಕೊಳ್ಳೋದು ಎಷ್ಟು ಸರಿ ಎಂಬ ಪ್ರಶ್ನೆಗಳಿವೆ. ಮೊದಲನೆಯದಾಗಿ ವ್ಯಕ್ತಿಯ ಗುಣಗಾನಕ್ಕೆ ಯಕ್ಷಗಾನದಂತಹ ಘನಕಲೆಯನ್ನು ಬಳಸಿಕೊಳ್ಳುವುದು, ಎರಡನೆದಾಗಿ ಚುನಾವಣಾ ಪ್ರಚಾರಕ್ಕೆ, ವ್ಯಕ್ತಿಗತ ಅಭಿಮಾನಕ್ಕೆ ಹಾಡು–ಕುಣಿತಗಳ ಮೂಲಕ ದೈವತ್ವಕ್ಕೇರಿಸುವುದು ಸರಿಯೇ ಎಂಬ ಚರ್ಚೆಗಳಿವೆ. ಕಳೆದ 2–3 ದಶಕಗಳಿಂದಲೂ ಮುಮ್ಮೇಳದ ಕಲಾವಿದರು ರಾಜಕೀಯ ವಿಚಾರವಾಗಿ ತಮ್ಮ ಮಾತುಕತೆಯಲ್ಲಿ ತುರುಕಿಸುವುದು, ಹಿಮ್ಮೇಳದಲ್ಲಿ ಗುಣಗಾನದ ರೂಪದಲ್ಲಿ ಭಾಗವತಿಕೆ ಮಾಡುವುದು ಇದರ ಬಗ್ಗೆ ನಿರಂತರ ಆಕ್ಷೇಪಗಳೂ ಕೇಳಿ ಬಂದಿವೆ. ಇದು ಎಲ್ಲಿವರೆಗೆ ಮುಂದುವರೆದಿದೆ ಎಂದರೆ ಕಲಾವಿದರೊಬ್ಬರ ಮೇಲೆ ಕೇಸ್ ದಾಖಲಾಗುವವರೆಗೆ ಈ ಬೆಳವಣಿಗೆ ನಡೆದಿತ್ತು. ಯಕ್ಷಗಾನ ಕಾರ್ಯಕರ್ತರು ರಾಜಕೀಯ ಕಾರ್ಯಕರ್ತರಂತೆ ರಂಗಸ್ಥಳದಲ್ಲಿ ಮಾತನಾಡ್ತಾರೆ ಅನ್ನೋ ಆರೋಪ ಹಲವಾರು ಬಾರಿ ಕೇಳಿ ಬಂದಿದೆ. ಇತ್ತೀಚಿಗೆ ಹೆಸರಾಂತ ಪತ್ರಿಕೆಯೊಂದರಲ್ಲಿ ಹಿರಿಯ ಕಲಾವಿದರೊಬ್ಬರ ಹಳೆಯ ವೀಡಿಯೋವನ್ನು ಉಲ್ಲೇಖಿಸಿ ರಾಜಕೀಯ ಪ್ರೇರಿತವಾಗಿ ಕೋಮು ನಿಂದನೆ ಮಾಡಿದ್ದಾರೆ ಎಂಬ ಆರೋಪ ನೀಡಿ ರಾಜ್ಯೋತ್ಸವ ಪ್ರಶಸ್ತಿಗೆ ಅವರು ಅರ್ಹರಲ್ಲ ಎಂಬುದಾಗಿ ಬಿಂಬಿಸಲಾಗಿತ್ತು. ಅದೇನೇ ಇದ್ದರೂ ಯಕ್ಷಗಾನವನ್ನು ರಾಜಕೀಯ ಮುಕ್ತವಾಗಿ ಪರಿಶುದ್ಧ ಕಲೆಯಾಗಿ ಉಳಿಸಿಕೊಳ್ಳಬೇಕಾದ ಜವಾಬ್ದಾರಿ ಕಲಾವಿದರಿಗಿದೆ.

ಕಾಲ್ಪನಿಕ ಪ್ರಸಂಗಗಳಲ್ಲಿ ಪ್ರಚಲಿತ ವಿಚಾರಗಳ ಬಗ್ಗೆ ಸಂಭಾಷಣೆಯಲ್ಲಿ ತಂದರೆ ತಪ್ಪೇನು ಎಂಬ ವಾದಿಗರಿದ್ದಾರೆ. ಕಾಲ್ಪನಿಕ ಪ್ರಸಂಗಗಳ ಸಂದರ್ಭದಲ್ಲೂ ಸಮಾಜದ ಓರೆಕೋರೆಗಳನ್ನು ಟೀಕಿಸುವ ಬೆಂಬಲಿಸುವ ಸ್ವಾತಂತ್ರ್ಯವನ್ನು ಕಲಾವಿದ ತೋರಬಹುದೇ ಹೊರತು ಒಂದು ಪಕ್ಷದ ಒಲವನ್ನು ತೋರಿಸುವುದು ಸಮಂಜಸಲ್ಲ ಎಂದೆನಿಸುತ್ತದೆ.

ಹೆಚ್ಚಾಗಿ ಹಿಂದಿನಿಂದಲೂ ಹಿಂದೂ ಧಾರ್ಮಿಕ ಪುರಾಣಗಳೇ ಯಕ್ಷಗಾನದ ರಂಗ ಪ್ರದರ್ಶನಗಳಾಗಿರೋದ್ರಿಂದ ಯಕ್ಷಗಾನದ ಅಭಿಮಾನಿಗಳು ಹೆಚ್ಚಾಗಿ ಹಿಂದೂಗಳೇ ಆದರೂ ರಾಜಕೀಯವಾಗಿ ನೋಡಿದಾಗ ಹಿಂದೂಗಳಲ್ಲಿ ಬೇರೆ ಬೇರೆ ಪಕ್ಷದ ಸಿದ್ಧಾಂತಗಳನ್ನು ನಂಬುವವರಿದ್ದಾರೆ. ಆ ಸಂದರ್ಭದಲ್ಲಿ ಅಹಿತಕರ ಬೆಳವಣಿಗೆಗಳಾಗುವುದು ಅನೇಕ ಸಲ ನಡೆದಿದೆ. ಕಲಾವಿದರು ಸಾಹಿತಿಗಳು ಮತ್ತು ಕಲೆ ರಾಜಕೀಯ ವ್ಯಕ್ತಿನಿಷ್ಠ ಹಾಗೂ ಪಕ್ಷನಿಷ್ಠವಾಗದೇ ಮುಂದುವರೆದರೆ ಕಲೆಯಲ್ಲಿ ಸ್ವತಂತ್ರತೆಯನ್ನು ಕಾಪಾಡಿಕೊಳ್ಳಬಹುದು. ಅಲ್ಲದೆ ರಾಜಕೀಯದ ಕೀಳು ವ್ಯವಹಾರದಿಂದ ಕಲುಷಿತಗೊಳ್ಳದೇ ಇರಬೇಕಾದ ಅನಿವಾರ್ಯತೆ ಕಲೆಗಿದೆ. ಯಾವುದೇ ಕಲೆ, ಸೃಜನಶೀಲ ಸಾಹಿತ್ಯ ಸ್ವತಂತ್ರವಾಗಿರಬೇಕು, ಯಾವುದೇ ರಾಜಕೀಯ ಪ್ರೇರಿತವಾಗಿರಬಾರದು. ಯಾವ ಪ್ರಭಾವಿ ವ್ಯಕ್ತಿಗಳ ಹಿಡಿತದಲ್ಲಿರಬಾರದು. ರಾಜಕೀಯದ ಒಲವು ಕಲಾವಿದರು ಹೊಂದಿದ್ದೇ ಆಗಿದ್ದರೆ ಕಲೆಯಿಂದ ದೂರವುಳಿದು ರಾಜಕೀಯದಲ್ಲಿ ತೊಡಗಿಸಿಕೊಂಡರೆ ಒಳಿತು. ರಾಜಕೀಯದಿಂದ ಕಲೆಗೆ ಉಪಯೋಗವಿದೆ. ಆದರೆ ಕಲೆಯೊಳಗೆ ರಾಜಕೀಯ ಎಂದಿಗೂ ನುಸುಳಬಾರದು. ಎಲ್ಲ ಪಕ್ಷವನ್ನು ಸಮಾನವಾಗಿ ಪರಿಗಣಿಸುವ ಮನೋಸ್ಥಿತಿ ಕಲಾವಿದರಲ್ಲಿರಬೇಕು. ರಾಜಕೀಯದ ಸಾಧನೆಯೇ ಬೇರೆ, ಕಲೆಯ ಸಾಧನೆಯೇ ಬೇರೆ. ರಾಜಕೀಯದ ಪ್ರಭಾವಕ್ಕೆ ಕಲೆಯನ್ನು ಮಾರಿಕೊಳ್ಳುವ ಮಟ್ಟಕ್ಕೆ ಕಲಾವಿದರು ಇಳಿಯುವುದು ಉಚಿತವಲ್ಲ. ಯಕ್ಷಗಾನ ರಾಜಕೀಯದಿಂದ ಮುಕ್ತವಾಗಿರ್ಬೇಕು ಅನ್ನೋ ಜವಾಬ್ದಾರಿಯನ್ನು ಕಲಾವಿದರು ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

***– ಶುಭಾಶಯ, ಸಂಪಾದಕರು***

---

***ನಿಮಗಿದು ಗೊತ್ತೇ? – ಯಕ್ಷಗಾನದ ಭೀಷ್ಮ ಎಂದೇ ಪ್ರಸಿದ್ಧರಾದ ಹರಿದಾಸ ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟರ ಆತ್ಮಚರಿತ್ರೆಯ ಹೆಸರು – "ಯಕ್ಷಗಾನ ಮತ್ತು ನಾನು" ಈ ಪುಸ್ತಕ 1981ರಲ್ಲಿ ಪ್ರಕಟವಾಯಿತು. ನಂತರ 2006ರಲ್ಲಿ ದ್ವಿತೀಯ ಮುದ್ರಣವನ್ನು ಕಂಡಿದೆ.***

## ಸರ್ವ ಧರ್ಮದ ಪ್ರತಿಭೆಗಳ ಸಂಗಮ
## ಭಾರತೀಯ ಸಂಸ್ಕೃತಿಯ ಪ್ರತೀಕ–ಯಕ್ಷಗಾನ

**ಇಂ**ದು, ವಿಶ್ವದ 52 ದೇಶಗಳಲ್ಲಿ ಯಕ್ಷಗಾನ ಪ್ರದರ್ಶನಗೊಳ್ಳುತ್ತಿದೆ ಎಂಬ ಮಾಹಿತಿಯಿದೆ. ಇಂದು ಯಕ್ಷಗಾನ ಕಲೆ ಕೇವಲ ಹಿಂದೂ ಧರ್ಮಕ್ಕೆ ಮಾತ್ರ ಸೀಮಿತವಾಗದೆ, ಸರ್ವ ಧರ್ಮೀಯರನ್ನೊಳಗೊಂಡು ಸಹಬಾಳ್ವೆಗೂ ಕಾರಣವಾಗುತ್ತಿದೆ. ಯಕ್ಷಗಾನದಲ್ಲಿ ಎಲ್ಲ ಜಾತಿ, ಎಲ್ಲ ಧರ್ಮದ ಕಲಾವಿದರಿದ್ದಾರೆ. ಇವರಲ್ಲಿ ಯಕ್ಷಗಾನ ಆಟವನ್ನು ಆಡಿಸುವವರು, ಯಕ್ಷಗಾನದಲ್ಲಿ ಸ್ವತಃ ಕಲಾವಿದರಾಗಿ ತೊಡಗಿಸಿಕೊಂಡವರು, ಯಕ್ಷಗಾನದ ಪ್ರಾಯೋಜಕರಾಗಿ, ಪ್ರೋತ್ಸಾಹಕರಾಗಿ ಕಾಣಿಸಿಕೊಂಡವರೂ ಇದ್ದಾರೆ ಎಂಬುದು ಗಮನಾರ್ಹ.

ಸಾಮಾನ್ಯವಾಗಿ ಯಕ್ಷಗಾನದಲ್ಲಿ ಪ್ರದರ್ಶನಗೊಳ್ಳುವುದರಲ್ಲಿ ಪೌರಾಣಿಕ ಪ್ರಸಂಗಗಳೇ ಅಧಿಕ. ಆದರೂ, ಜಾತಿ – ಧರ್ಮದ ಎಲ್ಲೆ ಮೀರಿ, ಹಿಂದೆಯೂ ಯಕ್ಷಗಾನವು ಉಳಿದ ಧರ್ಮೀಯರನ್ನು ಆಕರ್ಷಿಸಿತ್ತು. ಈಗಲೂ ಆಕರ್ಷಿಸುತ್ತಿದೆ ಎಂಬುದು ನಿರ್ವಿವಾದ.
ಯಕ್ಷಗಾನ ಕಲೆಗೆ ಜಾತಿ, ಧರ್ಮದ ತೊಡಕಿಲ್ಲ.



**ಯಕ್ಷಗಾನ ವೇಷದಲ್ಲಿ ಮಹಮ್ಮದ್ ಅಶ್ಫಕ್ ಹುಸೇನ್ ಉದ್ಯಾವರ**

ಹಿಂದೂ ಧರ್ಮೀಯರನ್ನು ಹೊರತುಪಡಿಸಿ, ಅನ್ಯ ಧರ್ಮೀಯರೂ ಯಕ್ಷಗಾನದಲ್ಲಿ ತೊಡಗಿಸಿಕೊಂಡಲ್ಲಿ ದೀರ್ಘ ಇತಿಹಾಸವೇ ಇದೆ. ಕಳೆದ ಶತಮಾನದಲ್ಲಿ, 1950ರ ದಶಕದಲ್ಲಿ, ಪಿ.ಎಫ್. ವಡೆಯರ್ ಎಂಬ ಮುಸ್ಲಿಂ ಕಲಾವಿದರೋರ್ವರು ತಾಳಮದ್ದಳೆ ಕ್ಷೇತ್ರದಲ್ಲಿ ಅರ್ಥಧಾರಿಯಾಗಿ, ಶೇಣಿ–ಸಾಮಗ ಕಾಲದಲ್ಲಿ ವಿಜೃಂಭಿಸಿದ್ದರು. ಉತ್ತಮ ಅರ್ಥಧಾರಿಗಳಾಗಿದ್ದುಕೊಂಡು, ಪ್ರೇಕ್ಷಕರ ಮನವನ್ನು ಗೆದ್ದು ತಮ್ಮದೇ ಆದ ಛಾಪನ್ನು ಮೂಡಿಸಿದ್ದರು. ನಂತರದಲ್ಲಿ 1970ರ ದಶಕದಲ್ಲಿ ಜೋಕಟ್ಟೆ ಮಹಮ್ಮದ್ ಎಂಬ ಮುಸ್ಲಿಂ ಬಾಂಧವರೋರ್ವರು, ತಾಳಮದ್ದಳೆ ಕ್ಷೇತ್ರದಲ್ಲಿ ಮಿಂಚಿದ್ದರು. ಇವರ ಕೌರವ, ಭೀಷ್ಮ, ಸಾಲ್ವ ಮುಂತಾದ ಪಾತ್ರಗಳು ಇವರಿಗೆ ಅತ್ಯಂತ ಪ್ರಸಿದ್ಧಿ ತಂದಿದ್ದವು. ಇವರು ಇತ್ತೀಚಿಗೆ ತಾನೇ ನಿಧನ ಹೊಂದಿದ್ದರು. 1990ರ ದಶಕದಲ್ಲಿ ಜಬ್ಬಾರ ಸಮೋ ಸಂಪಾಜೆಯವರು ಯಕ್ಷಗಾನ ರಂಗ ಪ್ರವೇಶಿಸಿ, ಯಕ್ಷಗಾನ ಕ್ಷೇತ್ರದಲ್ಲಿ ಸಂಚಲನ ಮೂಡಿಸಿ, ಇಂದಿಗೂ ತಮ್ಮ ಪಾರಮ್ಯ ಮೆರೆದಿದ್ದಾರೆ. ಜಬ್ಬಾರರ ಕೌರವ, ವಾಲಿ, ರಾವಣ, ವೀರಮಣಿ, ಹನುಮಂತ, ಶ್ರೀರಾಮ, ಶ್ರೀಕೃಷ್ಣ, ಅತಿಕಾಯ, ಜಾಂಬವ, ಭೀಷ್ಮ, ಮಾಗಧ ಮುಂತಾದ ಪಾತ್ರಗಳು ಇಂದಿಗೂ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. ಗ್ರಾಮೀಣ ಮಟ್ಟದಲ್ಲೂ ಕೆಲವಾರು ಮಂದಿ ತಾಳಮದ್ದಳೆ ಅರ್ಥಧಾರಿಯಾಗಿ ಗಮನ ಸೆಳೆದಿದ್ದಾರೆ. ಮೂಡುಬಿದಿರೆಯ ಇಜ್ಜಬ್ಬ ಎಂಬ ಮುಸ್ಲಿಂ ಬಾಂಧವರೋರ್ವರು ಅರ್ಥಧಾರಿಯಾಗಿ ಮೂಡುಬಿದಿರೆ ಪರಿಸರದಲ್ಲಿ ಹೆಸರು ಗಳಿಸಿದ್ದರು.

ಯಕ್ಷಗಾನ ವೇಷಧಾರಿಯಾಗಿಯೂ ತುಂಬಾ ಮಂದಿ ಮುಸ್ಲಿಂ–ಕ್ರೈಸ್ತ ಬಾಂಧವರು ಸೇವೆ ಸಲ್ಲಿಸಿದ್ದಾರೆ. ಅವರಲ್ಲಿ ಕ್ರಿಶ್ಚಿಯನ್ ಬಾಬು ಪ್ರಮುಖರು. ಸುಮಾರು 1950 ರ ದಶಕದಲ್ಲಿ ಕ್ರಿಶ್ಚನ್ ಬಾಬುರವರು ಅತ್ಯುತ್ತಮ ವೇಷಧಾರಿಯಾಗಿದ್ದರು. ಪುಂಡು ವೇಷಧಾರಿಯಾಗಿ ಯಕ್ಷಗಾನ ರಂಗ ಪ್ರವೇಶಿಸಿ ಅಪಾರ ಜನಪ್ರಿಯತೆ ಗಳಿಸಿದ್ದರು. ಜೋಡಾಟಗಳಲ್ಲಂತೂ ಕ್ರಿಶ್ಚನ್ ಬಾಬು ಎತ್ತಿದ ಕೈ. ಅಭಿಮನ್ಯು, ಬಬ್ರುವಾಹನ, ಚಂಡ–ಮುಂಡ ಮುಂತಾದ ಪಾತ್ರಗಳಲ್ಲಿ ಮಿಂಚಿ ಪ್ರೇಕ್ಷಕರ ಮನ ಗೆದ್ದಿದ್ದರು. ಕ್ರಿಶ್ಚನ್ ಬಾಬು ಜೋಡಾಟಗಳಲ್ಲಿ ಇದ್ದರೆ, ಗೆಲ್ಲುವುದು ಅವರೇ ಎಂಬುದು ಅಂದಿನ ಕಾಲದಲ್ಲಿ ಪ್ರಸಿದ್ಧಿಯಾಗಿತ್ತು. ***"ಜೋಡಾಟದ ಹೊಂತಕಾರಿ"*** ಎನಿಸಿದ ಬಾಬುರವರು ನೂರಾರು ಚಿನ್ನದ ಪದಕಗಳನ್ನು ಬಹುಮಾನ ರೂಪದಲ್ಲಿ ಪಡೆದಿದ್ದರು. ಅವರ ವೇಷ ನೋಡಲಿಕ್ಕಾಗಿಯೇ ಯಕ್ಷಗಾನಕ್ಕೆ ಬರುತ್ತಿದ್ದ ಪ್ರೇಕ್ಷಕರ ಸಂಖ್ಯೆಯೇ ಸಾವಿರಾರು ದಾಟುತ್ತಿತ್ತು. ಕರ್ನಾಟಕ ಮೇಳದಲ್ಲಿ ***"ಕೋಟಿ ಚೆನ್ನಯ"*** ಪ್ರಸಂಗ ಪ್ರಚಲಿತದಲ್ಲಿದ್ದಾಗ ಬಾಬುರವರ ಚಂದುಗಿಡಿ ಪಾತ್ರ ಅದ್ಭುತ ಯಶಸ್ಸನ್ನು ಗಳಿಸಿತ್ತು. ಸುಮಾರು 40 ವರ್ಷಗಳಷ್ಟು ಯಕ್ಷಗಾನದಲ್ಲಿ ದುಡಿದ ಬಾಬುರವರು 1990ರ ದಶಕದಲ್ಲಿ ನಿಧನರಾದರು. ಅವರ ನಿಧನದ ನಂತರ, ಬಾಬುರವರ ಮಗನಾದ ಮೂಡುಬಿದಿರೆ ಕ್ರಿಶ್ಚನ್ ಗಣೇಶ್‌ರವರು ಯಕ್ಷಗಾನ ರಂಗ ಪ್ರವೇಶಿಸಿದರೂ, ಬಾಬುರವರ ಸ್ಥಾನ ತುಂಬಲಾಗಲಿಲ್ಲ. ಅವರು ತಮ್ಮ ಸಣ್ಣ ಪ್ರಾಯದಲ್ಲೇ ನಿಧನರಾದ ಕಾರಣ ಹೆಚ್ಚಿನ ಸಾಧನೆ ಮಾಡಲಾಗಲಿಲ್ಲ. ನಂತರದ ದಿನಗಳಲ್ಲಿ ಬಹಳಷ್ಟು ಮುಸ್ಲಿಂ, ಕ್ರಿಶ್ಚಿಯನ್ ಕಲಾವಿದರು ಮೇಳಗಳಲ್ಲಿ ವೇಷಧಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಜೋಸೆಫ್ ಡಿಸೋಜಾ ನೆಲ್ಯಾಡಿ ಎಂಬ ಕಲಾವಿದರು ಉತ್ತಮ ಪುಂಡುವೇಷಧಾರಿಯಾಗಿ 1990ರ ದಶಕದಲ್ಲಿ ಕದ್ರಿ ಮೇಳದಲ್ಲಿ ಮಿಂಚಿದ್ದರು. ಬಡಗು ತಿಟ್ಟಿನಲ್ಲಿ ಮಹಮ್ಮದ್ ಗೌಸ್ ಎಂಬ ಕಲಾವಿದರು ಸುಮಾರು 50 ವರ್ಷಗಳಿಂದ ಮೇಳದಲ್ಲಿ ತಿರುಗಾಟ ನಡೆಸಿ, ಈಗಲೂ ಮೇಳದ ತಿರುಗಾಟದಲ್ಲಿ ಸಕ್ರಿಯರಾಗಿದ್ದಾರೆ. ಕೊಲ್ಲಿ ರಾಷ್ಟ್ರದಲ್ಲಿ ಉದ್ಯೋಗಿಯಾಗಿದ್ದರೂ, ಯಕ್ಷಗಾನದ ಸೆಳೆತದಿಂದಾಗಿ, ಕೊಲ್ಲಿಯ ಉದ್ಯೋಗ ತ್ಯಜಿಸಿ ಮರಳಿ ಊರಿಗೆ ಬಂದು ಯಕ್ಷಗಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಅಪರೂಪದ ಕಲಾವಿದರು ಗೌಸ್. ಮಳೆಗಾಲದಲ್ಲಿ ಅವರದ್ದೇ ಆದ "**ಯಕ್ಷ ಸೌರಭ ಪ್ರವಾಸಿ ಯಕ್ಷಗಾನ ಮಂಡಳಿ**" ಎಂಬ ಸಂಸ್ಥೆ ಸ್ಥಾಪಿಸಿ ಇಂದಿಗೂ ಪರವೂರುಗಳಲ್ಲೂ ಪ್ರದರ್ಶನ ನೀಡುತ್ತಿದ್ದಾರೆ. ಉತ್ತಮ ವೇಷಧಾರಿಯಾಗಿರುವ ಗೌಸ್‌ರವರ ದುಷ್ಟಬುದ್ಧಿ, ಕೌರ, ಭೀಷ್ಮ, ಮಾಗಧ, ವೀರಮಣಿ, ಹನುಮಂತ, ಭಸ್ಮಾಸುರ ಮುಂತಾದ ಪಾತ್ರಗಳು ಇಂದಿಗೂ ಅತ್ಯುತ್ತಮವೇ ಆಗಿದೆ. ವೃತ್ತಿಪರ ಕಲಾವಿದರಾಗಿ ತುಂಬಾ ಮುಸ್ಲಿಂ–ಕ್ರಿಶ್ಚನ್ ಯಕ್ಷಗಾನದಲ್ಲಿ ತೊಡಗಿಸಿ ಸೇವೆ ಸಲ್ಲಿಸಿದ್ದಾರೆ, ಈಗಲೂ ಸಲ್ಲಿಸುತ್ತಲೂ ಇದ್ದಾರೆ. ಈ ಪಟ್ಟಿಯಲ್ಲಿ ಹವ್ಯಾಸೀ ಮುಸ್ಲಿಂ–ಕ್ರಿಶ್ಚನ್ ಕಲಾವಿದರು ಇಂದಿಗೂ ಯಕ್ಷಗಾನದಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಗಮನಿಸಬಹುದು. ಕುವೈಟ್ ನಲ್ಲಿ ಉತ್ತಮ



ಯಕ್ಷಗಾನ ಕಲಾವಿದೆ ಅರ್ಷಿಯಾ

ಉದ್ಯೋಗದಲ್ಲಿರುವ ರಫೀಕುದ್ದೀನ್ ಮಡ್ಯಂತಾರ್‌ರವರು ಇದಕ್ಕೊಂದು ಉತ್ತಮ ಉದಾಹರಣೆ. ಭಾರತದಲ್ಲಿರುವಾಗ, ತಮ್ಮ ವಿದ್ಯಾರ್ಥಿ ಜೀವನದಲ್ಲಿ ಯಕ್ಷಗಾನದಲ್ಲಿ ವೇಷಧಾರಿ ಹಾಗೂ ಮದ್ದಲೆ ವಾದಕರಾಗಿ ತೊಡಗಿಸಿದ್ದರು. ಒಂದು ವರ್ಷದಲ್ಲಿ ಮೇಳದ ತಿರುಗಾಟವನ್ನೂ ಮಾಡಿದವರು. ನಂತರ ಉದ್ಯೋಗದ ನಿಮಿತ್ತ ಕುವೈಟ್‌ಗೆ ಹೋದರು. ಆದರೂ, ಕುವೈತ್‌ಗೆ ಹೋದರೂ, ಇಂದಿಗೂ ಯಕ್ಷಗಾನ ಪೋಷಕರಾಗಿ, ಮದ್ದಲೆ ವಾದಕರಾಗಿ ಯಕ್ಷಗಾನದಲ್ಲಿ ತೊಡಗಿಸಿಕೊಂಡಿದ್ದಾರೆ. ಊರಿಗೆ ಬಂದಾಗಲೆಲ್ಲಾ ಯಕ್ಷಗಾನ ಪ್ರದರ್ಶನ ವೀಕ್ಷಿಸುವುದು, ಮದ್ದಲೆ ವಾದನದಲ್ಲಿ ಸಹಕರಿಸುವುದನ್ನು ಮಾಡುತ್ತಲೇ ಇದ್ದಾರೆ. ಭಾರತದಿಂದ ಮದ್ದಲೆಯನ್ನು ಕುವೈತ್‌ಗೆ ತರಿಸಿ, ಮದ್ದಲೆ ವಾದನವನ್ನು ಮಾಡುತ್ತಾ ಇದ್ದಾರೆ. ಆಳ್ವಾಸ್ ಕಾಲೇಜಿನ ಹಿಂದಿನ ವಿದ್ಯಾರ್ಥಿಯಾದ ಮಹಮ್ಮದ್ ಆಶ್ವಕ್ ಹುಸೇನ್ ಉದ್ಯಾವರ ಎಂಬವರು ಉತ್ತಮ ಸ್ತ್ರೀ ಪಾತ್ರದ ಕಲಾವಿದರಾಗಿದ್ದಾರೆ. ಮುಸ್ತಾಕ್ ಹೆನ್ನಾಬೈಲು ಮುಂತಾದವರೂ ಯಕ್ಷಗಾನದಲ್ಲಿ ತೊಡಗಿಸಿಕೊಂಡಿದ್ದಾರೆ. ವಿಟ್ಲದ ಅರ್ಷಿಯಾ ಎಂಬ ಮುಸ್ಲಿಂ ಮಹಿಳಾ ಕಲಾವಿದೆಯೋರ್ವಳೂ ಇತ್ತೀಚೆಗೆ ಯಕ್ಷಗಾನದಲ್ಲಿ ಮಹಿಷಾಸುರನ ಪಾತ್ರ ಮಾಡಿ, ಸಾರ್ವಜನಿಕ ವಲಯದಲ್ಲಿ ದೊಡ್ಡ ಸಂಚಲನ ಮೂಡಿಸಿದ್ದಾರೆ. ಬಣ್ಣದ ವೇಷದ ಬಗ್ಗೆ ಅತೀವ ಆಸಕ್ತಿ ಹೊಂದಿರುವ ಅರ್ಷಿಯಾ ಶುಂಭಾಸುರ, ನಿಶಿಂಭಾಸುರ, ರಕ್ತಬೀಜ ಮುಂತಾದ ಪಾತ್ರಗಳನ್ನು ಚೆನ್ನಾಗಿ ನಿರ್ವಹಿಸಿದ್ದಾರೆ. ಮಂಗಳೂರಿನ ಕದಳಿ ಯಕ್ಷಗಾನ ಕಲಾಕೇಂದ್ರದ ರಮೇಶ್ ಭಟ್‌ರ ಶಿಷ್ಯೆಯಾಗಿದ್ದು, ಯಕ್ಷಗಾನದ ಚೆಂಡೆ ವಾದನದಲ್ಲೂ ಅರ್ಷಿಯಾ ಪಳಗಿದ್ದಾಳೆ. ಬಣ್ಣಗಾರಿಕೆಯನ್ನೂ ಕರಗತ ಮಾಡಿಕೊಂಡಿದ್ದಾಳೆ. ತನು ವಿಟ್ಲ ಎಂಬ ಯಕ್ಷಗಾನ ನಾಮದಿಂದ ಪ್ರಸಿದ್ಧಳಾದ, 20 ವರ್ಷ ಹರೆಯದ ಈಕೆ, ಯಕ್ಷಗಾನ ರಂಗ ಪ್ರವೇಶಿಸಿದ ಪ್ರಥಮ ಮುಸ್ಲಿಂ ಮಹಿಳಾ ಕಲಾವಿದೆ ಎಂಬುದು ಉಲ್ಲೇಖನೀಯ. ಕಲಾವಿದರಾಗಿ ಮಾತ್ರವಲ್ಲದೇ, ಯಕ್ಷಗಾನದ ಸೇವಾದಾರರಾಗಿಯೂ ಮುಸ್ಲಿಂ – ಕ್ರಿಶ್ಚನ್ ಬಾಂಧವರು ಹಿಂದಿನ ಕಾಲದಲ್ಲಿ ಮಾತ್ರವಲ್ಲದೆ, ಇಂದಿಗೂ ತೊಡಗಿಸಿಕೊಂಡಿದ್ದಾರೆ. ಕಟೀಲು ಮೇಳವು ಒಂದೇ ಇರುವ ಕಾಲದಲ್ಲಿ, ಪ್ರಥಮ ಸೇವೆಯಾಟದ ನಂತರದ ಪ್ರದರ್ಶನದ ಯಕ್ಷಗಾನ ಆಗುವುದು, ನನ್ನ ಹುಟ್ಟೂರಾದ ಬಜ್ಪೆಯಲ್ಲೇ. ಆ ಸೇವೆಯಾಟದ ಸೇವಾದಾರು ಕರೀಂ ಸಾಹೇಬ್(????) ಎಂಬವರು. ಆ ಪರಂಪರೆ ಬಹುಶಃ ಇಂದಿಗೂ ಉಳಿದುಕೊಂಡಿದೆ ಎಂದು ನನ್ನ ಅನಿಸಿಕೆ. ಜೆಪ್ಪು ಮಜಿಲದಲ್ಲಿ ಅಶೋಕ್ ತಾವ್ರೋ ಎಂಬ ಕ್ರಿಶ್ಚನ್ ಬಾಂಧವರ ನೇತೃತ್ವದಲ್ಲಿ, ಪಾವಂಜೆ ಮೇಳದವರು ಇಂದಿಗೂ ಅತ್ಯಂತ ವೈಭವದಲ್ಲಿ ಯಕ್ಷಗಾನ ಪ್ರದರ್ಶನ ಆಯೋಜಿಸುತ್ತಿದ್ದಾರೆ. (ಈ ಮೊದಲು ಕಟೀಲು ಐದನೇ ಮೇಳದ ಪ್ರದರ್ಶನ ಆಗುತ್ತಿದ್ದು, ಪಟ್ಲ ಸತೀಶ್ ಶೆಟ್ಟಿಯವರು ಪಾವಂಜೆ ಮೇಳ ಸ್ಥಾಪಿಸಿದ ನಂತರ, ಪಾವಂಜೆ ಮೇಳದವರಿಂದ ಈ ಯಕ್ಷಗಾನ ಪ್ರದರ್ಶನ ನಡೆಯುತ್ತಿದೆ) ಮೂಡುಬಿದಿರೆ ಸಮೀಪದ ಕಲ್ಲಮುಂಡ್ಕೂರಿನಲ್ಲಿ ಜೋಕಿಂ ಕೊರಿಯವರು ಇಂದಿಗೂ ಪಾವಂಜೆ ಮೇಳದ ಸೇವೆಯಾಟ ಆಡಿಸುತ್ತಿದ್ದಾರೆ. ಖಾದ್ರಿ ಬ್ಯಾರಿ ಎಂಬವರು ಅದೆಷ್ಟೋ ವರ್ಷಗಳಿಂದ ಕಟೀಲಿನಲ್ಲಿ ಆಟ ಆಡಿಸುತ್ತಿದ್ದು, ಇದೀಗ ಅವರ ಮಕ್ಕಳು ಮುಂದುವರಿಸಿಕೊಂಡು ಬಂದಿದ್ದಾರೆ. ಮುಡಿಪು ಎಂಬಲ್ಲಿ ಮುಸ್ಲಿಂ ಬಾಂಧವರೊಬ್ಬರು ಇಂದಿಗೂ ಕಟೀಲು ಮೇಳದವರ ಯಕ್ಷಗಾನ ಸೇವೆಯಾಟ ಆಡಿಸುತ್ತಿದ್ದಾರೆ. ಅರಸಿನಮಕ್ಕಿ ಎಂಬಲ್ಲಿ ಹತ್ತು ಸಮಸ್ತರ ಕಟೀಲು ಮೇಳದ ಯಕ್ಷಗಾನ ಆರಂಭವಾದುದೇ ಮುಸ್ಲಿಂ ಬಾಂಧವರೊಬ್ಬರಿಂದ. ಬಜ್ಪೆಯ ಸುಪ್ರಸಿದ್ಧ ಸುಡುಮದ್ದು ತಯಾರಕರಾದ ಬಶೀರ್ ಸಾಹೇಬ್, ಬಜ್ಪೆ ಸಮೀಪದ ಪೆರ್ಮುದೆ ಎಂಬಲ್ಲಿ ಪಿ.ಬಿ.ಪಿಂಟೋ ಎಂಬ ಕ್ರಿಶ್ಚನ್ ಬಾಂಧವರು ಹಲವಾರು ವರ್ಷಗಳಿಂದಲೂ ಕಟೀಲು ಮೇಳದ ಯಕ್ಷಗಾನ ಸೇವೆಯಾಟ ಸಲ್ಲಿಸುತ್ತಿದ್ದಾರೆ.




ಬಡಗು ತಿಟ್ಟಿನ ಕಲಾವಿದ ಮಹಮ್ಮದ್ ಗೌಸ್



ತಾಳಮದ್ದಲೆ ಅರ್ಥಧಾರಿ– ಜಬ್ಬರ್ ಸಮೋ

ಪೊಳಲಿಯಲ್ಲಿ ಧನು ಪೂಜೆಯಂದು ಮೋಂತು ರೊಡ್ರಿಗಸ್ ಎಂಬ ಕ್ರಿಶ್ಚನ್ ಬಾಂಧವರ ನೇತೃತ್ವದಲ್ಲಿ ಕಳೆದ 30 ವರ್ಷಗಳಿಂದಲೂ, ಕಟೀಲು ಮೇಳದವರಿಂದ ಯಕ್ಷಗಾನ ಸೇವೆಯಾಟ ಸಲ್ಲುತ್ತಿದೆ. ಯಕ್ಷಗಾನ ಪ್ರದರ್ಶನಕ್ಕಾಗಿಯೇ ಶಾಶ್ವತ ವೇದಿಕೆಯನ್ನೂ ನಿರ್ಮಿಸಿದ್ದಾರೆ. ಕಾರ್ಕಳದಲ್ಲಿ ವಲ್ಲಿ ಎಂಬವರು ಪ್ರತಿವರ್ಷವೂ ಅತ್ಯುತ್ತಮ ತಾಳಮದ್ದಳೆ ಕೂಟವನ್ನು ಆಯೋಜಿಸುತ್ತಿದ್ದಾರೆ. ಈ ಪಟ್ಟಿಯಲ್ಲಿ ಇನ್ನೂ ಅನೇಕರಿದ್ದಾರೆ ಎಂಬುದನ್ನು ಗಮನಿಸಿ. ಪ್ರೇಕ್ಷಕರಾಗಿಯೂ ಸಾವಿರಾರು ಮುಸ್ಲಿಂ–ಕ್ರಿಶ್ಚನ್ ಬಾಂಧವರು ಯಕ್ಷಗಾನ ಕಲೆಯನ್ನು ಆಸ್ವಾದಿಸುತ್ತಿದ್ದಾರೆ.

ಯಾವುದೇ ಕಲೆಗೆ ಜಾತಿ, ಧರ್ಮಗಳ ಎಲ್ಲೆ ಇಲ್ಲ. ಇದಕ್ಕೆ ಯಕ್ಷಗಾನವೂ ಹೊರತಲ್ಲ. ಎಲ್ಲಾ ವರ್ಗದವರನ್ನೂ ಯಕ್ಷಗಾನ ಕಲೆಯು ಆಕರ್ಷಿಸುತ್ತಿದೆ ಎಂಬುದು ಯಕ್ಷಗಾನ ಕಲೆಯ ಶಕ್ತಿ ಎನ್ನಬಹುದು. ***ಲೇಖಕರು– ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***



# ಯಕ್ಷರಂಗದ ಭೀಷ್ಮ – ಬಳ್ಕೂರು ಕೃಷ್ಣ ಯಾಜಿ



**ಬ**ಡಗುತಿಟ್ಟು ಯಕ್ಷಗಾನದ ಅಗ್ರಮಾನ್ಯ ಕಲಾವಿದನಾಗಿ, ಪೌರಾಣಿಕ ಪ್ರಸಂಗದ ಗಂಡು ಪಾತ್ರಗಳಿಗೆ ತನ್ನದೇ ಶೈಲಿಯಲ್ಲಿ ಜೀವತುಂಬಿ, ಪೌರಾಣಿಕ ಹಾಗೂ ಆಧುನಿಕ ಪ್ರಸಂಗಗಳ ಪ್ರೇಕ್ಷಕರ ಮನೆಮಾತಾದ ಮೇರು ಕಲಾವಿದ ಬಳ್ಕೂರು ಕೃಷ್ಣ ಯಾಜಿಯವರು. ಪ್ರಸಂಗದ ಪ್ರಧಾನ ಪಾತ್ರಗಳಲ್ಲಿ ಕೆರೆಮನೆ ಮಹಾಬಲ ಹೆಗಡೆಯವರ ರಂಗದ ಹಿಡಿತ ಮತ್ತು ಗತ್ತುಗಾರಿಕೆಯನ್ನು ಇವರ ವೇಷಗಳಲ್ಲಿ ಗುರುತಿಸಬಹುದಾಗಿದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಇಡಗುಂಜಿ ಮೇಳದಲ್ಲಿ ಕೆರೆಮನೆ ಬಂಧುಗಳ ಮತ್ತು ಕುಂಜಾಲು ಹಾಸ್ಯಗಾರರಿಂದ ನಾನು ಸಾಕಷ್ಟು ಕಲಿತಿದ್ದೇನೆ ಎಂದು ಯಾಜಿಯವರು ವಿನಮ್ರರಾಗಿ ನುಡಿಯುತ್ತಾರೆ.

ನಿರಂತರ 40 ವರ್ಷ ಬಡಗುತಿಟ್ಟು ರಂಗಸ್ಥಳವನ್ನು ಆಳಿದ ಇವರನ್ನು ರಂಗದ ರಾಜನೆಂದೇ ಜನ ಗುರುತಿಸಿದ್ದಾರೆ. ರಂಗಸ್ಥಳದಲ್ಲಿ ಒಂದೇ ರಾತ್ರಿಯಲ್ಲಿ ರಾಮನೂ ಆಗಬಲ್ಲ, ರಾವಣನೂ ಆಗಬಲ್ಲ, ಕೃಷ್ಣನೂ ಆಗಬಲ್ಲ, ಕಂಸನೂ ಆಗಬಲ್ಲ, ಭೀಷ್ಮನೂ ಆಗಬಲ್ಲ, ಪರಶುರಾಮ, ಸಾಲ್ವನೂ ಆಗಬಲ್ಲ, ಸಂದಾನದ ಕೃಷ್ಣ ಕೌರವ ಎರಡೂ ಆಗಬಲ್ಲ, ಋತುಪರ್ಣನೂ ಆಗಬಲ್ಲ, ಬಾಹುಕನೂ ಆಗಬಲ್ಲ, ಸಮಗ್ರ ಭೀಷ್ಮದ ಮೂರೂ ಭೀಷ್ಮನಾಗಿ ವಿಭಿನ್ನವಾಗಿ ಅಭಿನಯಿಸಬಲ್ಲ ಸಮಕಾಲೀನ ಬೆರಳೆಣಿಕೆಯ ಕಲಾವಿದರಲ್ಲಿ ಯಾಜಿಯವರೂ ಒಬ್ಬರು ಎನ್ನುವುದನ್ನು ಪ್ರೇಕ್ಷಕರು ಒಪ್ಪಬಹುದಾದ ಸತ್ಯ. ಭೀಷ್ಮ ವಿಜಯದ ಭೀಷ್ಮ, ಧರ್ಮಾಂಗದ ದಿಗ್ವಿಜಯದ ಭರತ, ಶನೀಶ್ವರ ಮಹಾತ್ಮೆಯ ವಿಕ್ರಮಾದಿತ್ಯ, ಹೀಗೆ ಪಾತ್ರ ಯಾವುದೇ ಇರಲಿ ಪ್ರವೇಶದಿಂದ ನಿರ್ಗಮನದವರೆಗೆ ಪ್ರೇಕ್ಷಕರನ್ನು ತನ್ನ ಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಬಲ್ಲ ಶಿಷ್ಟ ಕಲಾವಿದರಿವರು.

ಬಡಗುತಿಟ್ಟು ಯಕ್ಷಗಾನಕ್ಕೆ ಅಗ್ರಮಾನ್ಯ ಕಲಾವಿದರನ್ನು ನೀಡಿದ ಉ.ಕ. ಜಿಲ್ಲೆಯ ಕುಮಟಾ ತಾಲೂಕಿ ವಾಲಗಳ್ಳಿ ಎಂಬ ಕುಗ್ರಾಮದಲ್ಲಿ 1956ರಲ್ಲಿ ಜನಿಸಿದ ಯಾಜಿಯವರು ಪ್ರೌಢ ಶಿಕ್ಷಣವನ್ನು ಪಡೆದು ಇಡಗುಂಜಿ ಮೇಳದಲ್ಲಿ ಗೆಜ್ಜೆ ಕಟ್ಟಿದರು. ನಂತರ ಒಂದು ವರ್ಷ ಅಮೃತೇಶ್ವರಿ ಮೇಳದಲ್ಲಿ ತಿರುಗಾಟ ಮಾಡಿದರು. 1975ರಲ್ಲಿ ಸಾಲಿಗ್ರಾಮ ಮೇಳ ಸೇರಿ, ಬಳಿಕ ಎಂಟು ವರ್ಷ ಇಡಗುಂಜಿ ಮೇಳದಲ್ಲಿ ತಿರುಗಾಟ ನಡೆಸಿ ಪುನಹ 1990ರಲ್ಲಿ ಸಾಲಿಗ್ರಾಮ ಮೇಳ ಸೇರಿದ ಅವರು ಅಂದಿನಿಂದ ಇಂದಿನವರೆಗೆ ಅದೇ ಮೇಳದಲ್ಲಿ ಸೇವೆ ಸಲ್ಲಿಸುತಿದ್ದಾರೆ. ತನ್ನ ಆಕಾರಬದ್ಧ ವೇಷದ ಸೊಬಗು, ಸುಂದರ ಶರೀರ, ಶಾರೀರದಿಂದ ಅವರು ಪುರುಷ ವೇಷ, ಎರಡನೇ ವೇಷ ಹಾಗು ಪುಂಡುವೇಷಗಳಿಗೆ ಬಹುಬೇಗ ಹೊಂದಿಕೊಳ್ಳುತ್ತಾರೆ. ಕೇದಿಗೆ ಮುಂದಲೆ ಮತ್ತು ಕಿರೀಟವೆರಡಕ್ಕು ಹೊಂದಿಕೊಳ್ಳುವ ಆಳ್ತನವಿರುವುದರಿಂದ ಅವರು ಜಾಂಬವತಿ ಕಲ್ಯಾಣದ ಜಾಂಬವನೂ ಆಗಬಲ್ಲರು, ಕೃಷ್ಣನೂ ಆಗಬಲ್ಲರು, ಸುಭದ್ರಾ ಕಲ್ಯಾಣದ ಕೃಷ್ಣನೂ ಆಗಬಲ್ಲರು, ಬಲರಾಮನೂ ಆಗಬಲ್ಲರು. ರಂಗದ ನಿಲುವು, ಚಲನೆ, ನಡೆಯಲ್ಲಿ ಸ್ವಂತಿಕೆಯ ಛಾಪು, ಗತ್ತುಗಾರಿಕೆ, ಹೆಚ್ಚೂ ಅಲ್ಲದ ಕಡಿಮೆಯೂ ಅಲ್ಲದ ಸಮತೂಕದ ಮಾತು, ಔಚಿತ್ಯಕ್ಕೆ ತಕ್ಕ ಅಭಿನಯ, ಅಧಿಕವಲ್ಲದ ಕುಣಿತ, ರಂಗದಲ್ಲಿ ಅಚ್ಚುಕಟ್ಟು, ಸುಸ್ಪಷ್ಟವಾದ ಮಾತು, ಅಪಾರ ಪ್ರತ್ಯುತ್ಪನ್ನ ಮತಿತ್ವ, ಶ್ರುತಿಬದ್ಧತೆ, ಶಿಸ್ತು ಬದ್ದತೆಯಿಂದ ಅಭಿವ್ಯಕ್ತಿ ಪರಿಣಾಮಕಾರಿಯಾಗುವಂತೆ ನೋಡಿಕೊಳ್ಳುವ ಜಾಗರೂಕತೆ ಇವುಗಳು ಯಾಜಿಯವರ ಆಸ್ತಿಗಳಾಗಿದೆ. ಮಲಗಿರುವ ಪಿತನನ್ನು ಎಬ್ಬಿಸುತ ಗಾಂಗೇಯ ಎನ್ನುವಲ್ಲಿ ದೇವವ್ರತನ ಪಿತೃಭಕ್ತಿ, ಬಂದೆಯ ಇನವಂಶವಾರಿಧಿ ಎನ್ನುವಲ್ಲಿ ಶ್ರೀರಾಮನ ಭ್ರಾತೃಪ್ರೇಮ, ತಿಳಿದೆನು ನಿನ್ನಯ ಚಿತ್ತದುಮ್ಮಳಿಕೆಯ ನಿಜದೊಲವ ಎನ್ನುವಲ್ಲಿ ಸುಧನ್ವನ ದೈವಭಕ್ತಿ, ಸರಸಿಜಾಂಬಕಿಯರೆ ಕೇಳಿ ಎನ್ನುವಲ್ಲಿ ಆಜನ್ಮ ಬ್ರಹ್ಮಚಾರಿಯೊಬ್ಬ ಪರಸ್ತ್ರೀಯನ್ನು ಮಾತನಾಡಿಸುವ ಪರಿ, ಗುರುವೆ ನಿನ್ನೊಳು ಸಮರಗೈವೆನು ಎನ್ನುವಲ್ಲಿ ಪರಶುರಾಮರಲ್ಲಿ ಭೀಷ್ಮನ ಗುರುಭಕ್ತಿ, ಹೀಗೆ ಯಾಜಿಯವರ ವಿಭಿನ್ನ ಪಾತ್ರಗಳನ್ನು ನೋಡಿದವರಿಗೆ ಅಲ್ಲೆಲ್ಲಾ ಅವರ ಅಭಿನಯ ಚಾತುರ್ಯ ಎದ್ದು ಕಾಣುವುದು ಮಾತ್ರವಲ್ಲದೇ ಯಾಜಿಯವರಿಗೆ ಯಾಜಿಯವರೇ ಹೋಲಿಕೆ ಎನ್ನಬಹುದಾಗಿದೆ. ಅದ್ಬುತವಾದ ಲಯಸಿದ್ಧಿ, ಶ್ರುತಿಬದ್ಧತೆ, ಶೃಂಗಾರ, ಕರುಣ, ಭಕ್ತಿ, ಬೀಭಸ್ಸ, ಹಾಸ್ಯ ಮುಂತಾದ ನವರಸಗಳನ್ನು ರಸವತ್ತಾಗಿ ಅಭಿನಯಿಸುವ ಅವರ ಅಭಿನಯ ಸಾಮರ್ಥ್ಯ ವರ್ಣಿಸಲಸದಳ. ರಂಗದ ಗಾಂಭೀರ್ಯ ಮತ್ತು ಗತ್ತುಗಾರಿಕೆಯೊಂದಿಗೆ ಅವರು ಕೆರೆಮನೆ ಮಹಾಬಲ ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆರೆಮನೆ ಶಂಭು ಹೆಗಡೆ, ಜಲವಳ್ಳಿ ವೆಂಕಟೇಶ ರಾವ್, ಕೊಂಡದಕುಳಿ ರಾಮಚಂದ್ರ ಹೆಗಡೆ, ಶಿರಳಗಿ ಭಾಸ್ಕರ ಜೋಶಿ, ಯಲಗುಪ್ಪ ಸುಬ್ರಮಣ್ಯ ಹೆಗಡೆ, ಹಳ್ಳಾಡಿ ಜಯರಾಮ ಶೆಟ್ಟಿ, ಶಶಿಕಾಂತ ಶೆಟ್ಟಿ, ಮುಂತಾದ ಹಿರಿಯ ಕಿರಿಯ ಕಲಾವಿದರೊಂದಿಗೆ ಅವರು ಅಭಿನಯಿಸಿದ ಪೌರಾಣಿಕ ಪ್ರಸಂಗದ ಪಾತ್ರಗಳು ಅಪಾರ ಜನ ಮನ್ನಣೆ ಗಳಿಸಿವೆ.ಬಡಾಬಡಗಿನ ಉತ್ತರಕನ್ನಡ ಶೈಲಿಯ ಕಲಾವಿದರಾದ ಇವರು ನಡುತಿಟ್ಟಿನ ಮೇರುಕಲಾವಿದರಾದ ಶಿರಿಯಾರ ಮಂಜು ನಾಯಕ್, ಹಳ್ಳಾಡಿ ಮಂಜಯ್ಯ ಶೆಟ್ಟಿ, ಅರಾಟೆ ಮಂಜುನಾಥ, ಕೋಟ ವೈಕುಂಠ, ಐರೋಡಿ ಗೋವಿಂದಪ್ಪ, ಎಂ.ಎ.ನಾಯಕ್, ತೀರ್ಥಹಳ್ಳಿ ಗೋಪಾಲಾಚಾರ್, ರಾಮ ನಾಯರಿ, ಹೊಸಂಗಡಿ ರಾಜೀವ ಶೆಟ್ಟಿ, ಆರ್ಗೋಡು ಮೋಹನದಾಸ ಶೆಣೈ, ಮುಂತಾದ ಕಲಾವಿದರೊಂದಿಗೆ ಅಷ್ಟೇ ಸಮರ್ಥವಾಗಿ ಹೊಂದಿಕೊಂಡವರು. ಎರಡು ವಿಭಿನ್ನ ಶೈಲಿಗಳ ಹೊಂದಾಣಿಕೆಗೆ ಯಾಜಿಯವರು ಒಂದು ಉತ್ತಮ ಉದಾಹರಣೆ. ಹಾಸ್ಯಕಲಾವಿದರನ್ನು ರಂಗದಲ್ಲಿ ಸಮರ್ಥವಾಗಿ ದುಡಿಸಿಕೊಂಡು ಅವರು ಕಾಣಿಸಿಕೊಳ್ಳುವಲ್ಲಿ ಯಾಜಿಯವರ ಕೊಡುಗೆ ಅಪಾರ ಎನ್ನುವುದು ಹಿರಿಯ ಹಾಸ್ಯ ಕಲಾವಿದರಾದ ಹಳ್ಳಾಡಿ ಜಯರಾಮ ಶೆಟ್ಟಿ ಮತ್ತು ಕುಂಜಾಲು ರಾಮಕೃಷ್ಣರ ಮನದಾಳದ ಅನಿಸಿಕೆ. ಹಿರಿಯ ಭಾಗವತರಾದ ನೆಬ್ಬೂರು ನಾರಾಯಣ ಭಾಗವತ, ಮರವಂತೆ ನರಸಿಂಹದಾಸ, ನಾರ್ಣಪ್ಪ ಉಪ್ಪೂರ, ನೆಲ್ಲೂರು ಮರಿಯಪ್ಪಾಚಾರ್, ಮುಂತಾದ ಭಾಗವತರ ಹಾಡುಗಾರಿಕೆಯಲ್ಲಿ ಅಭಿನಯಿಸಿದ ಅವರು ಮುಂದಿನ ಪೀಳಿಗೆಯ ಗುಂಡ್ಮಿ ಕಾಳಿಂಗ ನಾವಡ, ವಿದ್ವಾನ್ ಗಣಪತಿ ಭಟ್, ಕೊಳಗಿ ಕೇಶವ ಹೆಗಡೆ, ಹೆರಂಜಾಲು ಗೋಪಾಲ ಗಾಣಿಗ, ರಾಘವೇಂದ್ರ ಮಯ್ಯ ಮುಂತಾದವರ ಹಿಮ್ಮೇಳಕ್ಕೂ ಅಷ್ಟೇ ಸಲೀಸಾಗಿ ಹೊಂದಿಕೊಂಡಿದ್ದಾರೆ. ಮಾರವಿ ಏಕತಾಳ ಮತ್ತು ಝಂಪೆ ತಾಳದ ಪದ್ಯಗಳನ್ನು ಹೆಜ್ಜೆ ಹಾಕಿ ಪದ್ಯ ಎತ್ತುಗಡೆ ಮಾಡುವ ಅವರ ಲಯಸಿದ್ಧಿ ಅಸಾಧಾರಣ. ಈ ನೆಲೆಯಲ್ಲಿ ಬಡಗುತಿಟ್ಟಿನ ಪರಂಪರೆಯಲ್ಲಿ ಅವರು ಪ್ರತ್ಯೇಕವಾಗಿ ಗುರುತಿಸಲ್ಪಡುತ್ತಾರೆ. ಆಧುನಿಕ ಪ್ರಸಂಗಗಳಲ್ಲಿ ಪೌರಾಣಿಕ ನೆಲೆಗಟ್ಟನ್ನು ಮೀರದೆ ಅಭಿನಯಿಸಿದ ಯಾಜಿಯವರು ಆ



ಬಳ್ಕೂರು ಕೃಷ್ಣ ಯಾಜಿ

ವಿಭಾಗದಲ್ಲೂ ಸೈ ಎನಿಸಿಕೊಂಡಿದ್ದಾರೆ. ನಾಗಶ್ರೀ ಪ್ರಸಂಗದ ಶಿಥಿಲ. ಚೆಲುವೆ ಚಿತ್ರಾವತಿಯ ಹೇಮಾಂಗದ, ಸತಿ ಸೀಮಂತಿನಿ, ರಂಗನಾಯಕಿ, ಧರ್ಮ ಸಂಕ್ರಾಂತಿ, ಚೈತ್ರಪಲ್ಲವಿ ಮುಂತಾದ ಪ್ರಸಂಗದ ಅವರ ಪಾತ್ರಗಳು ಪೌರಾಣಿಕ ನೆಲೆಗಟ್ಟಿನಲ್ಲಿ ಗಟ್ಟಿಯಾಗಿ ನಿಂತಿವೆ. ದ್ವಂದ್ವ ಭಾವಗಳುಳ್ಳ ಈಶ್ವರಿ ಪರಮೇಶ್ವರಿ, ಅಗ್ನಿನಕ್ಷತ್ರ ಮುಂತಾದ ಪ್ರಸಂಗಗಳ ಕ್ಲಿಷ್ಟಕರ ಪಾತ್ರಗಳನ್ನು ಪ್ರೇಕ್ಷಕರ ಮನಮುಟ್ಟುವಂತೆ ಅಭಿನಯಿಸಿದ್ದು ಅವರ ಹೊಸ ಪ್ರಸಂಗಗಳ ಅಭಿನಯ ಸಿದ್ಧಿಗೆ ಸಾಕ್ಷಿಯಾಗಿ ನಿಂತಿವೆ. ನಿರಂತರ 39 ವರ್ಷಗಳ ಕಲಾಸೇವೆಯಲ್ಲಿ ಯಕ್ಷಗಾನದಿಂದ ತಾನು ಪಡೆದದ್ದನ್ನು ಹೋಲಿಸಿದರೆ ಸಮಾಜಕ್ಕೆ ನೀಡಿದ್ದು ಕಡಿಮೆ ಎಂದು ವಿನಮ್ರರಾಗಿ ನುಡಿಯುವ ಸಜ್ಜನ ಕಲಾವಿದರಾದ ಇವರು ಕೆರೆಯ ನೀರನು ಕೆರೆಗೆ ಚೆಲ್ಲುವ ಕಿರುಪ್ರಯತ್ನವಾಗಿ ಅಶಕ್ತ 'ಲಾವಿದರನ್ನು



ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ

ಗುರುತಿಸಿ ತನ್ನಿಂದಾದ ಸಹಾಯ ಹಸ್ತವನ್ನು ನೀಡುವ ಆದರ್ಶ ಕಾರ್ಯಕ್ರಮವನ್ನು ಹಮ್ಮಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ. ಯಕ್ಷಗಾನ ಪೌರಾಣಿಕ ಕಥಾವಸ್ತುವನ್ನು ಹೊಂದಿರಬೇಕು, ನೈತಿಕತೆ, ಆದರ್ಶ, ಯಕ್ಷಗಾನ ಕಥಾವಸ್ತುವಿನ ತಿರುಳಾಗಿರಬೇಕು, ಆದರೆ ಪ್ರೇಕ್ಷಕರ ಅಭಿರುಚಿಗನುಗುಣವಾಗಿ ಬದಲಾಗಬೇಕಾದುದು ಕಲಾವಿದನ ಅನಿವಾರ್ಯ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಕಲಾಸಂಸ್ಥೆಯ ಅಳಿವು ಉಳಿವಿನ ದೃಷ್ಟಿ, ಪ್ರೇಕ್ಷಕರ ಅಭಿರುಚಿಗೆ ಪ್ರಸ್ತುತ ಗಿಮಿಕ್‌ಗಳು ಅನಿವಾರ್ಯವಾದರೂ ಯಕ್ಷಗಾನದ ಮೂಲ ಸ್ವರೂಪವನ್ನು ಉಳಿಸುವಲ್ಲಿ ಇವು ಪೂರಕವಲ್ಲ ಎನ್ನುವುದು ಇವರ ಪ್ರಾಮಾಣಿಕ ಅನಿಸಿಕೆ. ತನ್ನ ಯಕ್ಷ ಕೈಂಕರ್ಯದಲ್ಲಿ ನೂರಕ್ಕೂ ಅಧಿಕ ಸನ್ಮಾನ, ಪ್ರಶಸ್ತಿ, ಬಿರುದನ್ನು ಬಾಚಿಕೊಂಡಿರುವ ಯಾಜಿಯವರಿಗೆ ಉಡುಪಿಯ ಹರ್ಷ ಗೃಹೋಪಯೋಗಿ ಸಾಮಗ್ರಿಗಳ ಸಂಸ್ಥೆಯ ಸಹಯೋಗದಲ್ಲಿ ನೀಡಲ್ಪಡುವ ಕೆ.ಎಸ್.ನಿಡಂಬೂರು ಪ್ರಶಸ್ತಿ ಯೋಗ್ಯವಾಗಿಯೇ ಸಂದಿದೆ.

---

# ಧೀರ ಕಲೆಯೊಳಗೆ ಕೀರವಾಣಿಯರು – 19

## *"ಯಕ್ಷಮಂಜೂಷಾ"ದ ಸ್ಥಾಪಕಿ, ಹೆಮ್ಮೆಯ ಯಕ್ಷಗಾನ ಸಾಧಕಿ– ಶ್ರೀಮತಿ ವಿದ್ಯಾ ಕೋಳ್ಯೂರು*

ಯಕ್ಷಗಾನಕ್ಕಿರುವ ಇತಿಹಾಸ ಬಹಳ ಹಿಂದಿನದು. ಅದರಲ್ಲಿ ಆಗಿಹೋದ ಕಲಾವಿದರದೆಷ್ಟೋ ಮಂದಿ. ಯಕ್ಷಗಾನವನ್ನು ಬೆಳೆಸಿದ ಅದರ ಕೀರ್ತಿಯನ್ನು ಬಾನೆತ್ತರಕ್ಕೆ ಹಾರಿಸಿದ ಹಿರಿಯರನೇಕರಿದ್ದಾರೆ. ಆದರೆ ಈ ಕ್ಷೇತ್ರದಲ್ಲಿ ಮಹಿಳಾ ಕಲಾವಿದೆಯರು ಸಿಗುವುದು ಮಾತ್ರ ಕಡಿಮೆ. ಯಕ್ಷಗಾನ ಕ್ಷೇತ್ರಕ್ಕೆ ಕಾಲಿಟ್ಟ ಮಹಿಳೆಯರಂತೂ ಯಕ್ಷಗಾನ ಕ್ಷೇತ್ರದಲ್ಲಿ ತಾವೂ ಬೆಳೆದದ್ದರ ಜೊತೆಗೆ ತಮ್ಮ ಕಲಾಸೇವೆಯ ಮುಖೇನ ಯಕ್ಷಗಾನವನ್ನು ಬೆಳೆಸಿದ್ದಾರೆ ಎಂದರೆ ತಪ್ಪೆನಿಸಲಾರದು. ಯಕ್ಷಗಾನವನ್ನು ಬೆಳೆಸುವುದೋ? ಹಾಗೆಂದರೇನು...? ಎಂದು ಕೆಲವರಿಗೆ ಅನ್ನಿಸಬಹುದು. ಕಲೆ ತನ್ನ ವ್ಯಾಪ್ತಿಯನ್ನು, ತನ್ನೊಳಗಿನ ಸಂಗತಿಗಳನ್ನು ಅರ್ಥಾತ್ ಸಾಹಿತ್ಯವೋ, ಹಿಮ್ಮೇಳ–ಮುಮ್ಮೇಳದ ಸಂಗತಿಗಳೋ.. ಇಂತಹವುಗಳನ್ನು ಹೆಚ್ಚಿಸಿಕೊಂಡು ಪ್ರಪಂಚದಾದ್ಯಂತ ಬೆಳೆಯುವುದಿದೆಯಲ್ಲ ಅದೊಂದು ಸೋಜಿಗವೇ ಸರಿ. ಕಲಾರಾಧಕನಾದವನಿಗೆ ಇಂತಹದ್ದ ಅರ್ಥವಾದೀತು.

ಇದೇ ರೀತಿಯಲ್ಲಿ ಯಕ್ಷಗಾನವನ್ನು ಭಾರತದ ಗಡಿ ದಾಟಿ ಹೊರದೇಶಗಳಿಗೂ ಪರಂಪರೆಯನ್ನು ಉಳಿಸಿಕೊಂಡು ದಾಟಿಸಿದ ಗಟ್ಟಿಗಿತ್ತಿ "ಯಕ್ಷಮಂಜೂಷಾ" ಎನ್ನುವ ಸಂಸ್ಥೆಯ ಸ್ಥಾಪಕಿ, ನಿರ್ದೇಶಕಿ ಶ್ರೀಮತಿ ವಿದ್ಯಾ ಕೋಳ್ಯೂರು. ಯಕ್ಷಗಾನವನ್ನು ಒಂದರ್ಥದಲ್ಲಿ ತನ್ನ ವೃತ್ತಿಯಾಗಿಸಿಕೊಂಡ ಮಹಿಳೆ ಇವರು. ನಮ್ಮ ದೇಶದ 22ಕ್ಕೂ ಮಿಕ್ಕಿ ರಾಜ್ಯಗಳಲ್ಲಿ, ಅಮೇರಿಕಾದ 12 ರಾಜ್ಯಗಳಲ್ಲಿ ಯಕ್ಷಗಾನದ ತಂಡವನ್ನು ಕರೆದುಕೊಂಡು ಹೋಗಿ ಪ್ರದರ್ಶಿಸಿದ ಹಿರಿಮೆ ಇವರದು.

ಪ್ರಸಿದ್ಧ ಹಿರಿಯ ಯಕ್ಷಗಾನ ಕಲಾವಿದರಾದ ಶ್ರೀ ರಾಮಚಂದ್ರ ರಾವ್ ಕೊಳ್ಯೂರು ಹಾಗೂ ಶ್ರೀಮತಿ ಯಶೋದಾ ರಾವ್ ಅವರ ಮಗಳಾಗಿ 1980 ರಲ್ಲಿ ಮಂಗಳೂರಿನಲ್ಲಿ ಜನಿಸಿದ ವಿದ್ಯಾ ಅವರು ತನ್ನ 7 ನೇ ವಯಸ್ಸಿನಲ್ಲೇ ಯಕ್ಷಗಾನವನ್ನು ತನ್ನೊಳಗೆ ತುಂಬಿಕೊಂಡವರು. ಬಳಿಕ ತನ್ನ ತಂದೆಯವರಿಂದ ಹೆಚ್ಚಿನ ಯಕ್ಷಗಾನವನ್ನು ಜ್ಞಾನವನ್ನು ಪಡೆದುಕೊಳ್ಳುತ್ತಾ ಕಲೆಯಲ್ಲಿ ಸಂಪೂರಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡವರು.

ವಿದ್ಯಾ ಕೋಳ್ಯೂರು ಅವರು ತಮ್ಮ ಕ್ರೀಯಾಶೀಲತೆ, ಉತ್ತಮ ನಿರ್ದೇಶನ ಚಾತುರ್ಯ, ಅಭಿನಯ ಕೌಶಲದ ಮೂಲಕ ಅನುಭವಿ ಕಲಾವಿದರಿಂದ, ವಿಮರ್ಶಕರಿಂದ, ಕಲಾರಾಧಕರಿಂದ ಕೊಂಡಾಡಲ್ಪಟ್ಟವರು. ಭಾವನಾತ್ಮಕ ಪಾತ್ರಗಳನ್ನು ಹೆಚ್ಚಾಗಿ ಇಷ್ಟಪಡುವ ವಿದ್ಯಾ ಅವರು ತಮ್ಮ ಭಾವನೆಗಳ ಮೂಲಕ ಸಹೃದಯೀ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುತ್ತಾರೆ ಇವರು. ಇವರ ಪಾತ್ರಗಳು ಇವರ ತಂದೆಯವರಾದ ಕೋಳ್ಯೂರು ರಾಮಚಂದ್ರ ರಾಯರನ್ನು ನೆನಪಿಸದೇ ಇರುವುದಿಲ್ಲ. ಇವರ ಪಾತ್ರದ ಪ್ರಸ್ತುತಿಯೇ ಹಾಗೆ. ಬೇಕಾದ ಪೂರ್ವ ತಯಾರಿಗಳನ್ನು ಮಾಡಿಕೊಂಡು ತಾವು ಪಾತ್ರವಾಗುವ ಪರಿ ಸೊಗಸು.

ವಿದ್ಯಾ ಅವರು ಸೀತೆ, ದಮಯಂತಿ, ಚಂದ್ರಮತಿ, ಸುಭದ್ರೆ, ದ್ರೌಪದಿ, ಅಂಬೆ, ದಾಕ್ಷಾಯಿಣಿ, ಮಾಯಾ ಶೂರ್ಪನಖಿ, ಮಾಯಾ ಪೂತನಿ, ಮಾಯಾ ಅಜಮುಖಿ ಹೀಗೆ ನಾನಾ ತೆರನಾದ ಸ್ತ್ರೀ ಪಾತ್ರಗಳ ಜೊತೆಗೆ ಕೃಷ್ಣ, ಸುಧನ್ವ, ಬಭ್ರುವಾಹನ, ಅರ್ಜುನನಂತಹ ಪಾತ್ರಗಳನ್ನೂ ಸಮರ್ಥವಾಗಿ ನಿರ್ವಹಿಸಿದವರಿವರು. ಪ್ರತಿಯೊಂದು ಪಾತ್ರಗಳನ್ನು ನಿರ್ವಹಿಸುವಾಗಲೂ ಅದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿ, ಅದರ ಪ್ರಸ್ತುತಿಯನ್ನು ಮಾಡುವುದು ಇವರ ಅಭ್ಯಾಸ. ವಿದ್ಯಾ ಕೋಳ್ಯೂರು ಉತ್ತಮ ವೇಷಧಾರಿ ಮಾತ್ರವಲ್ಲ ಉತ್ತಮ ನಿರ್ದೇಶಕಿ, ಉತ್ತಮ ಸಂಯೋಜಕಿ ಕೂಡಾ, ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಹೆಚ್ಚಾಗಿ ಪ್ರದರ್ಶನಗಳನ್ನು







ಕಾಣುತ್ತಿದ್ದ ಯಕ್ಷಗಾನವನ್ನು ಪ್ರಪಂಚದಾದ್ಯಂತ ಪಸರಿಸುವ ಪಣತೊಟ್ಟು "ಯಕ್ಷಮಂಜೂಷಾ" ಎನ್ನುವ ಸಂಸ್ಥೆಯನ್ನು ಕಟ್ಟಿ, ಯಕ್ಷಗಾನವನ್ನು ಪ್ರದರ್ಶಿಸುವ ಉದ್ದೇಶ ಮಾತ್ರವಲ್ಲದೇ, ಯಕ್ಷಗಾನವನ್ನು ಪುಟ್ಟ ಮಕ್ಕಳಿಗೂ ಕಲಿಸಿ, ಅವರಿಂದ ಪ್ರದರ್ಶಿಸುವ ಹಾಗೆ ಮಾಡುವ ಸಾಮರ್ಥ್ಯ ಉಳ್ಳವರು. ದೇಶದಲ್ಲಿ ಮಾತ್ರವಲ್ಲದೇ ಅಮೇರಿಕಾದಲ್ಲೂ ಕೂಡಾ ಮಕ್ಕಳಿಗೆ ಯಕ್ಷಗಾನವನ್ನು ಕಲಿಸಿಕೊಟ್ಟು ಉತ್ತಮ ಪ್ರದರ್ಶನವನ್ನು ಮಾಡಿಸಿದ್ದಾರೆ. ನಮ್ಮ ಕನ್ನಡ ಭಾಷೆಯಲ್ಲಿ ಮಾತ್ರವಲ್ಲದೇ ರಾಷ್ಟ್ರಭಾಷೆಯಾದ ಹಿಂದಿಯಲ್ಲಿ 400ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ. ಅಮೇರಿಕಾದಲ್ಲಿ ಇಂಗ್ಲಿಷ್ ಅಡಿಬರೆಹಗಳ ಮೂಲಕ ಪ್ರದರ್ಶನವನ್ನು ನೀಡಿದ ಹೆಮ್ಮೆಯ ತಂಡ ಇವರದು.

2015 ರಲ್ಲಿ ಲಂಡನ್ ನ ಭಾರತೀಯ ವಿದ್ಯಾ ಭವನಕ್ಕೆ ತಮ್ಮ ತಂಡವನ್ನು ಕರೆದುಕೊಂಡು ಹೋಗಿ ಇಂಗ್ಲೀಷ್ ಅಡಿಬರೆಹಗಳ ಮೂಲಕ ಕನ್ನಡ ಭಾಷೆಯಲ್ಲೇ ಯಕ್ಷಗಾನ ಪ್ರದರ್ಶನವನ್ನು ನೀಡಿ ಬಂದಿದ್ದಾರೆ. ಇವರು ಅನೇಕ ಪ್ರಾಯೋಗಿಕ ಉಪನ್ಯಾಸಗಳನ್ನು ಭಾರತದ ಬೇರೆ ಬೇರೆ ಕಾಲೇಜುಗಳಲ್ಲಿ ಮಾತ್ರವಲ್ಲದೇ ನಾರ್ತ್ ಕ್ಯಾರೊಲಿನಾ ಯೂನಿವರ್ಸಿಟಿ, ಯು ಎಮ್ ಬಿಸಿ ಮತ್ತು ಸ್ವಾಮಿ ನಾರಾಯಣ ಸ್ಕೂಲ್ ಲಂಡನ್ ನಲ್ಲೂ ನೀಡಿದ್ದಾರೆ. ಇವರ ಲಂಡನ್ ನ ಪ್ರದರ್ಶನ ಇನ್ಫೋಸಿಸ್ ಸಂಸ್ಥೆಯಿಂದ ಪ್ರಾಯೋಜಿಸಲ್ಪಟ್ಟಿತ್ತು. ಶ್ರೀಮತಿ ಸುಧಾ ಮೂರ್ತಿಯವರು ಪ್ರದರ್ಶನವನ್ನು ವೀಕ್ಷಿಸಿದ್ದರು. 2022ರಲ್ಲಿ ವಾರಣಾಸಿ ಮತ್ತು ಅಯೋಧ್ಯಾ ದೀಪೋತ್ಸವದಲ್ಲಿ 2 ಪ್ರದರ್ಶನಗಳನ್ನು ಇವರ ತಂಡ ನೀಡಿದೆ. ಬೆಂಗಳೂರು ರಾಮಯ್ಯದಲ್ಲಿ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ, ಕೊಡಗಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಮ್ಮೇಳನದಲ್ಲಿ, 2022 ರ ಎಡನೀರು ಚಾತುರ್ಮಾಸದಲ್ಲಿ ಹಿಂದಿ ಬಾಷೆಯಲ್ಲಿ 'ಪಂಚವಟಿ' ಯಕ್ಷಗಾನ ಪ್ರದರ್ಶನವನ್ನು ನೀಡಿದ್ದಾರೆ. ಶ್ರೀಮತಿ ವಿದ್ಯಾ ಕೋಳ್ಯೂರು ತಮ್ಮ ಸಾಧನೆಗೆ ಭಾರತದ ಅನೇಕ ಸಂಘ – ಸಂಸ್ಥೆಗಳಿಂದ ಮಾತ್ರವಲ್ಲದೇ ಹೋರದೇಶಗಲ್ಲೂ ಸನ್ಮಾನಕ್ಕೆ ಭಾಜನರಾಗಿದ್ದಾರೆ. ಕೇಂದ್ರದ ಸಂಗೀತ ನಾಟಕ ಅಕಾಡೆಮಿ ಕೊಡಮಾಡುವ 2011 ರ 'ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ' ಮತ್ತು ಇಂಡಿಯನ್ ಎಕ್ಸ್ ಪ್ರೆಸ್ ನವರ "ದೇವಿ" ಪ್ರಶಸ್ತಿಗೂ ಭಾಜನರಾದವರು ಇವರು. ಪೊಳಲಿ ಯಕ್ಷೋತ್ಸವದಲ್ಲಿ ಇವರ ಗೌರವಿಸಿ, ಸನ್ಮಾನಿಸಿದ್ದರು. ಶ್ರೀಮತಿ ವಿದ್ಯಾ ಕೋಳ್ಯೂರು ಅವರು ಇನ್ನಷ್ಟು ಯಕ್ಷಗಾನ ಕ್ಷೇತ್ರದಲ್ಲಿ ಕಲಾಸೇವೆಯನ್ನು ಮಾಡಲಿ, ಅವರ ಕಲಾಜೀವನ ಇನ್ನಷ್ಟು ಉಜ್ವಲವಾಗಲಿ ಎಂಬ ಆಶಯವಷ್ಟೇ ನಮ್ಮದು.



**ಸಾಯಿಸುಮಾ ಎಂ.**
**ನಾವಡ**

# ಶೇಡಿಗುಮ್ಮೆ ವಾಸುದೇವ ಭಟ್ಟರ ಯಕ್ಷಗಾನ ಪ್ರಸಂಗ ಕೃತಿಗಳು

**ಶೇ**ಡಿಗುಮ್ಮೆ ವಾಸುದೇವ ಭಟ್ಟ(ಜನನ 13–07–1946) ಹಿರಿಯ ಯಕ್ಷಗಾನ ಕವಿ. ಇವರ ತಂದೆ ಶೇಡಿಗುಮ್ಮೆ ನಾರಾಯಣ ಭಟ್ಟ ಮತ್ತು ತಾಯಿ ಸರಸ್ವತಿಯಮ್ಮ. ಕಾಸರಗೋಡಿನ ಕುಂಬಳೆಯಲ್ಲಿ ನೆಲೆಸಿದ್ದಾರೆ. ಪತ್ನಿ ಲೀಲಾವತಿ. ಇಬ್ಬರು ಪುತ್ರರು. 25ಕ್ಕೂ ಹೆಚ್ಚು ಛಂದೋಬದ್ಧ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ ಇವರು ಈಗಲೂ ಪ್ರಸಂಗ ರಚನೆಯನ್ನು ಮುಂದುವರಿಸುತ್ತಿರುವುದು ಸಂತೋಷದ ಸಂಗತಿ. ಕೆಲವು ಪ್ರಸಂಗ ಕೃತಿಗಳು ಪ್ರಕಟವಾಗಿದ್ದರೆ ಇನ್ನು ಕೆಲವು ಹಸ್ತಪ್ರತಿ ರೂಪದಲ್ಲಿ ಇವೆ.

ಶೇಡಿಗುಮ್ಮೆ ವಾಸುದೇವ ಭಟ್ಟರು ತಮ್ಮ ಪ್ರಥಮ ಯಕ್ಷಗಾನ ಪ್ರಸಂಗ ಸುಂದೋಪಸುಂದರ ಕಾಳಗವನ್ನು ತಾವು ವಿದ್ಯಾರ್ಥಿಯಾಗಿದ್ದಾಗಲೇ 1964 ರಲ್ಲಿ ರಚಿಸಿ ಯಕ್ಷಕವಿಯಾಗಿ ಗುರುತಿಸಲ್ಪಟ್ಟಿದ್ದಾರೆ. ಇದರೊಂದಿಗೆ 1975ರಲ್ಲಿ ರಚಿಸಿದ ಭ್ರಮರವೇಣಿ ಸ್ವಯಂವರ, 1976 ರಲ್ಲಿ ರಚಿಸಿದ ವಾಲಿಜನ್ಮ 2015 ರಲ್ಲಿ ರಚಿಸಿದ ದುರಂತ ಮಾನಸಿ ಶೂರ್ಪನಖಾ ಈ ನಾಲ್ಕು ಪೌರಾಣಿಕ ಯಕ್ಷಗಾನ ಪ್ರಸಂಗಗಳನ್ನು ಯಕ್ಷಕುಸುಮ ಯಕ್ಷಸಂಪುಟದಲ್ಲಿ ಗಾಯತ್ರಿ ಪ್ರಕಾಶನ ಕಿನ್ನಿಗೋಳಿ ಇವರು 2016ರಲ್ಲಿ ಪ್ರಕಟಿಸಿದ್ದಾರೆ. ವಾಸುದೇವ ಭಟ್ಟರ ವೀರಕೇಸರಿ ವಿಜಯ ಪ್ರಸಂಗವನ್ನು ಎನ್ ಎಚ್ ಈಶ್ವರ ಭಟ್ಟರು 1979 ರಲ್ಲಿ ಪ್ರಕಟಿಸಿದ್ದಾರೆ. ಇವರ ಇನ್ನೊಂದು ಕೃತಿ ರಾಜಾ ಮುಚುಕುಂದವನ್ನು ದ. ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ , ಕಲ್ಕೂರ ಪ್ರತಿಷ್ಠಾನ ಮಂಗಳೂರು ಇವರು 2019 ರಲ್ಲಿ ಪ್ರಕಟಿಸಿದ್ದಾರೆ. ಪೌರಾಣಿಕ ಪ್ರಸಂಗಗಳ ಜೊತೆಗೆ ಕೆಲವು ಆಧುನಿಕ ಪ್ರಸಂಗಗಳನ್ನು ಬರೆದ ಶೇಡಿಗುಮ್ಮೆಯವರು ಕ್ರಿಕೆಟ್ ತಾರೆ ಸಚಿನ್



ಶೇಡಿಗುಮ್ಮೆ ವಾಸುದೇವ ಭಟ್ಟರು

ತೆಂಡೂಲ್ಕರ್ ಅವರ ಕ್ರಿಕೆಟ್ ಸಾಧನೆಯನ್ನು ಕುರಿತು ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಎನ್ನುವ ವಿಶಿಷ್ಟ ಯಕ್ಷಗಾನ ಪ್ರಸಂಗವನ್ನು ಕೂಡ ರಚಿಸಿದ್ದಾರೆ. ಪ್ರಥುರಾಜ ವಿಜಯ, ವಿಜಯ ಖಡ್ಗ ಮಹಾತ್ಮೆ, ಪ್ರದ್ಯುಮ್ನ ಚರಿತ್ರೆ, ಋಷಭ ಚರಿತ್ರೆ, ವೈಷ್ಣವೀ ದೇವೀ ಮಹಾತ್ಮೆ, ಆದಿಚುಂಚನಗಿರಿ ಮಹಾತ್ಮೆ, ತೊಡಿಕಾನ ಕ್ಷೇತ್ರ ಮಹಾತ್ಮೆ, ಕಾವೇರಿ ಮಹಾತ್ಮೆ, ಕಾರ್ಗಿಲ್ ವಿಜಯ, ಸತ್ಯದರ್ಶನ, ಶಿಶಿಲೇಶ್ವರ ವೈಭವ, ಮಧುರ ಶೈಲೇಂದ್ರಿ, ಅಕ್ಷರಾಂಬಿಕಾ ಮಹಿಮೆ, ಸ್ವಾತಂತ್ರ್ಯ ಸಂಗ್ರಾಮ, ಮಂದಾರವತಿ ಪರಿಣಯ, ರಾಣಿ ಸುಲೋಚನಾ, ನಾಗನಂದಿನಿ, ಅಪ್ಪಿಕೋ ಚಳವಳಿ, ಯಮಳಾರ್ಜುನ ಮೋಕ್ಷ, ಆತ್ಮರಕ್ಷಣೆ, ಗಂಗಾಭವಾನಿ ಮುಂತಾದ ಹಲವು ಪ್ರಸಂಗಗಳು ಇನ್ನೂ ಪ್ರಕಟಣೆ ಕಾಣಬೇಕಾಗಿದೆ. ಹಿರಿಯ ಯಕ್ಷಗಾನ ಕವಿ ಡಿ ಎಸ್ ಶ್ರೀಧರ್ ಅವರು ಇತ್ತೀಚೆಗೆ ಬರೆದು ಪ್ರಕಟಿಸಿದ ಪರಶುರಾಮ ಪೌರಾಣಿಕ ಕಾದಂಬರಿಯನ್ನು ಆಧರಿಸಿ ಸಾವಿರಕ್ಕೂ ಹೆಚ್ಚು ಪದ್ಯಗಳಿಂದ ಕೂಡಿದ ಪರಶುರಾಮ ಯಕ್ಷಗಾನ ಪ್ರಸಂಗವನ್ನು ಶೇಡಿಗುಮ್ಮೆ ವಾಸುದೇವ ಭಟ್ಟರು ಸದ್ಯ ರಚಿಸುತ್ತಿದ್ದು ಇದು ಇವರ ಕವಿ ಪ್ರೌಢಿಮೆಗೆ ಸಾಕ್ಷಿಯಾಗಲಿದೆ. ಇವರ ಪ್ರಸಂಗ ಕೃತಿಗಳು ಶುದ್ಧ ಸಾಹಿತ್ಯ ಮತ್ತು ಛಂದಸ್ಸಿನಿಂದ ಕೂಡಿದ್ದು ತಾಳಮದ್ದಳೆ ಮತ್ತು ಯಕ್ಷಗಾನ ಪ್ರದರ್ಶನ ಎರಡಕ್ಕೂ ಯೋಗ್ಯವಾಗಿವೆ. ಓದುಗರಿಗೂ ಹಾಡುಗಬ್ಬವಾಗಿ ಇಷ್ಟವಾಗುತ್ತದೆ. ಯಕ್ಷಗಾನ ಸಾಹಿತ್ಯಾಸಕ್ತರು ಇವರ ಪ್ರಸಂಗ ಕೃತಿಗಳನ್ನು ಗುರುತಿಸಿ, ಓದಿ, ಪ್ರದರ್ಶಿಸಿ ಪ್ರೋತ್ಸಾಹ ನೀಡಿದರೆ ಕವಿಯ ಶ್ರಮ ಸಾರ್ಥಕವಾಗುತ್ತದೆ. ಇವರ ಅಪೂರ್ವ ಕೃತಿಗಳು ಶೀಘ್ರ ಪ್ರಕಟವಾಗಿ ಯಕ್ಷಸಾಹಿತ್ಯ ಕ್ಷೇತ್ರಕ್ಕೆ ಸೇರ್ಪಡೆಗೊಳ್ಳಲಿ ಎಂದು ಆಶಿಸುತ್ತೇನೆ.

***ಲೇಖಕರು- ಉಮೇಶ ಶಿರೂರು, ಬೆಂಗಳೂರು 9448353910***

---

## ಸಂಗೀತ ಆಸ್ವಾದಿಸಲು ಯಕ್ಷಗಾನಕ್ಕೆ ಹೋಗಬೇಕೆ?

**ಯ**ಕ್ಷಗಾನ ಅದೆಷ್ಟು ಮಧುರವಾದ ಶಬ್ಧ? ಹೆಸರಿನಲ್ಲೇ ಅದರ ಮಾರ್ದವತೆ ಅನುಭವಕ್ಕೆ ಬರುವ ರೀತಿ ಬಹುಶಃ ಯಾವ ಕಲೆಯ ಹೆಸರಲ್ಲಿಯೂ ಕಂಡುವರುವುದಿಲ್ಲ. ಆ ಮಾರ್ದವತೆಯ ಮಿಡಿತ ಅದರಲ್ಲಿ ಸೇರಿಕೊಂಡ ರೀತಿ ಅದರ ಸುಸಂಸ್ಕೃತ ಗುಣಗಳಿಂದ. ಈ ಗುಣಗಳು ನಮ್ಮ ಕಣ್ಣಳತೆಯ ಅವಧಿಯಲ್ಲಿ ಆಗಿ ಹೋದ ಆವಿಷ್ಕಾರ. ಈಗ ಅದು ನಮ್ಮ ಕಣ್ಣೆದುರಿಗೇ ಕುಸಿಯುತ್ತಿರುವ ಅನುಭವ. ಯಕ್ಷಗಾನವನ್ನು ಉಸಿರಾಗಿ ಕಂಡ ಹಿರಿಯರ ಅನಿಸಿಕೆ ಇದು. ಯಾಕೆಂದರೆ ಇದೆಲ್ಲದಕ್ಕೂ ಸಾಕ್ಷಿಯಾಗಿ ನಿಂತವರು. ಈಗ ಇದು ಬೇಡ ಎಂದು ದೂರ ಉಳಿದರೂ ಅದು ಯಾವುದೋ ರೂಪದಲ್ಲಿ ಮೈಮೇಲೆ ಬಿದ್ದಂತಾಗುತ್ತದೆ. ಕೊಡವಿಕೊಳ್ಳುವುದಕ್ಕೆ ಸಾಧ್ಯವಾಗದ ಅಸಹಾಯಕತೆ. ಬಾಲ್ಯದಿಂದಲೇ ಕಲೆ ಎಂದರೆ ಅದು ಯಕ್ಷಗಾನ ಎಂಬಂತೆ ಸರ್ವವ್ಯಾಪಿಯಾಗಿ ಮನಸ್ಸಿನಲ್ಲಿ ಅಚ್ಚೊತ್ತಿರುವುದಕ್ಕೆ ಅದನ್ನು ಸರಳವಾಗಿ ಆಸ್ವಾದಿಸುವುದಕ್ಕೆ ಇದು ಅತಿ ಸೂಕ್ತವಾಗಿತ್ತು. ಕಠಿಣವಾದ ಜ್ಞಾನದ ಅರಿವಿನ ಅವಶ್ಯಕತೆ ಇಲ್ಲದ ಪಾಮರನೂ ಪಂಡಿತನೂ ಏಕರೀತಿಯಲ್ಲಿ ಅನುಭವಿಸಬಲ್ಲ ಗುಣ ಆ ಸೆಳೆತ ಅತಿಶಯವೇನೂ ಅಲ್ಲ. ಆದರೆ ಅದೇ ವ್ಯಾಪಕತೆ ಅದಕ್ಕೆ ಈಗ ಮುಳುವಾಗಿ ಪರಿಣಮಿಸಿದೆ. ಯಕ್ಷಗಾನದ flexibility ಅದಕ್ಕೆ ಏನೂ ಸೇರಿಸಬಲ್ಲ ಆವಿಷ್ಕಾರವನ್ನು ತಂದಿದೆ.

ನನಗೆ ಯಕ್ಷಗಾನದ ಸರಳತೆ ಅರ್ಥವಿಸಿದ ಒಂದು ಬಗೆಯಾದರೆ ಅದರಲ್ಲಿನ ವಿಷಯ ಮೌಲ್ಯ ಅರಿವಾದ ನಂತರ ಅದು ಹವ್ಯಾಸವಾಯಿತು. ಬರಿದೇ ಓರ್ವ ಸಾಮಾನ್ಯ ಪ್ರೇಕ್ಷಕನಿಗೂ ತುಂಬಿ ಕೊಡಬಲ್ಲ ಜ್ಞಾನ ಸಂಪತ್ತು ಇಲ್ಲಿ ಸಿಗುವಾಗ ಇದು ಕೇವಲ ಕಲೆ ಹವ್ಯಾಸಕ್ಕೆ ಸೀಮಿತವಾಗಲಿಲ್ಲ. ಇದು ಅಧ್ಯಯನವಾಯಿತು. ಈಗ ನಮ್ಮ ಅರಿವು ಹೆಚ್ಚಾಯಿತೋ ಇಲ್ಲ ಭ್ರಮಾಧೀನರಾದೆವೋ ಸಂದೇಹ ಪಡುವಂತಾಗಿದೆ. ಯಕ್ಷಗಾನದ ಮೌಲ್ಯ ಕುಸಿಯುವಾಗ ಇನ್ನು ಇದರಲ್ಲಿ ಏನು ಉಳಿದಿದೆ ಎಂಬ ನಿರಾಸಕ್ತಿಯಲ್ಲಿ ಭ್ರಮೆ ಕಳಚಿಬಿಡುತ್ತದೆ. ಕಲ್ಪವೃಕ್ಷದ ಟೊಂಗೆ ಕಳೆದು ಕೇವಲ ಕಂಬವಾದಂತೆ ಯಕ್ಷಗಾನ ನಿರ್ವಾಣವಾಗಿ ಇನ್ನು ಏನಿಲ್ಲ ಎಂಬ ಅಸಹಾಯಕತೆಯಲ್ಲಿ ಅಂಗಲಾಚುತ್ತದೆ. ಇನ್ನೂ ಏನಾದರೂ ಇದೆ ಎಂದು ಹೇಳಿದರೆ ಅದು ಕಸಿದು ತೇಗುವ ಮನೋಭಾವವಾಗುತ್ತದೆ. ಯಾಕೆಂದರೆ ಈಗಿನ ಮನೋವೃತ್ತಿ ಅದೇ ಬಗೆಯಲ್ಲಿದೆ. ದಶಕಗಳ ಹಿಂದೆ ಅಂದರೆ ಬಾಲ್ಯದಲ್ಲಿ ಕಾಣುತ್ತಿದ್ದ ಯಕ್ಷಗಾನ ಕ್ರಮೇಣ ಹಾದಿ ಪಲ್ಲಟಗೊಂಡಂತೆ ಸಂಗೀತ ಅಳವಡಿಕೆಯಾಯಿತು. ಯಕ್ಷಗಾನದ ಕುಣಿತ ಅದು ಪರಿವರ್ತಿತ ನೃತ್ಯವಾಗಿ ಬದಲಾಗಿ ಯಕ್ಷಗಾನ ಕೇವಲ ಹೊರಾವರಣದಲ್ಲಿ ಉಳಿದು ಅದರ ಒಳಗೆ ಇನ್ನೇನೋ ನುಸುಳುವುದಕ್ಕೆ ತೊಡಗಿತು. ಆದರೆ ಏನೋ ಕಳೆದು ಹೋದ ಅನುಭವ. ಯಕ್ಷಗಾನದಲ್ಲಿ ನನಗೆ ಇಷ್ಟವಾದವು ಎರಡು ಅಂಗ. ಒಂದು ಹಿಮ್ಮೇಳ, ಇನ್ನೊಂದು ಅರ್ಥಗಾರಿಕೆ. ಅದರಲ್ಲಿ ಅರ್ಥಗಾರಿಕೆ ಆಕರ್ಷಣೆಯನ್ನು ಕಳೆದುಕೊಂಡರೆ ಇನ್ನೊಂದು ಸಂಗೀತಮಯವಾಗಿ ಸತ್ವಹೀನವಾಗಿದೆ. ಸಂಗೀತ ಇಲ್ಲಿ ಅಸ್ವಾದಿಸುವುದಕ್ಕಿಂತ ಪರಿಶುದ್ಧ ಸಂಗೀತವನ್ನು ಮೂಲದಲ್ಲೇ ಅನುಭವಿಸಬಹುದು.

ಭಗ್ನವಾದದ್ದು ಹೇಗೆ ಆರಾಧನೆಗೆ ಅರ್ಹವಲ್ಲವೋ, ಹಾಗೇ ಒಡೆದ ಕನ್ನಡಿಯಲ್ಲಿ ಮುಖಬಿಂಬ ನೋಡಬಾರದು. ಹಾಗಾಗಿ ಅಪೂರ್ಣ ಎಂದು ಅರಿವಾದಾಗ ಮನಸ್ಸಿನ ಅತೃಪ್ತಿ ವೈರಾಗ್ಯ ರೂಪ ತಳೆದು ಬಿಡುತ್ತದೆ. ಭಗ್ನವಾದದ್ದನ್ನು ಉಪಯೋಗಿಸುವುದೆಂದರೆ ಅದು ದಾರಿದ್ರ್ಯದ ಸಂಕೇತ. ಈಗಂತೂ ಅನಿವಾರ್ಯತೆ ಇಲ್ಲ. ಮುಂದೆ ಪರಿಪೂರ್ಣತೆಯಲ್ಲಿ ಅನುಭವಿಸುವ ಆಶಯ ಮಾತ್ರ ಸದ್ಯಕ್ಕೆ ಉಳಿದಿದೆ. ಈಗ ಯಕ್ಷಗಾನ ಪ್ರೇಕ್ಷಕನ ಮಟ್ಟಿಗೆ ಅನಿವಾರ್ಯ ಸಂಗತಿಯಲ್ಲ ಎಂಬುದು ಸತ್ಯ. ಯಕ್ಷಗಾನ ಈಗ ವಿಷಾದ ದರ್ಶನವಾಗುತ್ತದೆ.

***ಯಕ್ಷ ಚಿಂತನ ಬ್ಲಾಗ್‌ನಲ್ಲಿ ಪ್ರಕಟವಾದ ಬರಹಗಾರರೊಬ್ಬರ ಅನಿಸಿಕೆ***

---

**ಗಮನಿಸಿ- ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ-ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ- 9482847978. ನಮ್ಮ ವೆಬ್ ಸೈಟ್ ವಿಳಾಸ- https://nyt.1ngo.in/ – ಸಂಪಾದಕರು**